ಕರ್ನಾಟಕ ವಿಧಾನಸಭೆ

ಬುಧವಾರವಾರ 3ನೇ ಮೇ 2000ರಂದು
ಸದನವು ವಿಧಾನಸೌಧದಲ್ಲಿ ವಿಧಾನಸಭೆಯ ಸಭಾಂಗಣದಲ್ಲಿ
ಬೆಳಿಗ್ಗೆ 10-50 ಗಂಟೆಗೆ
ಸಮಾವೇಶಗೊಂಡಿತು.

ಉಪಾಧ್ಯಕ್ಷರು (ಶ್ರೀ ಎಂ.ವಿ. ವೆಂಕಟಪ್ಪ) ಅವರುಪೀಠವನ್ನು ಅಲಂಕರಿಸಿದ್ದರು.

1. ಜಿಲ್ಲಾ ಪಂಚಾಯತ್, ತಾಲ್ಲೂಕು ಪಂಚಾಯತ್ ಚುನಾವಣೆಯ ಮೀಸಲಾತಿ ವ್ಯತ್ಯಾಸದ ಬಗ್ಗೆ ವಿರೋಧ ಪಕ್ಷದವರಿಂದ ಸಭಾತ್ಯಾಗ

ಅಧ್ಯಕ್ಷರು : ಮಾನ್ಯ ಘೋರ್ಪಡೆಯವರೆ, ನಿಮ್ಮ ಇಲಾಖೆಗೆ ಸಂಬಂಧಪಟ್ಟಂತೆ ಉತ್ತರವನ್ನು ಕೊಡುವುದಕ್ಕೆ ಪ್ರಾರಂಭ ಮಾಡಿ.

+ಶ್ರೀ ಪಿ.ಜಿ.ಆರ್.ಸಿಂಧ್ಯಾ (ಕನಕಪುರ) : ಮಾನ್ಯ ಅಧ್ಯಕ್ಷರೆ, ನಿನ್ನೆಯ ದಿನ ಬೆಳಗಿನಿಂದಲೂ ರಾಜ್ಯದಲ್ಲಿ ತಾಲ್ಲೂಕು ಮತ್ತು ಜಿಲ್ಲಾ ಪಂಚಾಯಿತಿ ಚುನಾವಣೆಗಳನ್ನು ಚುನಾವಣಾ ಆಯೋಗವು ಘೋಷಣೆ ಮಾಡಿರುವುದರಿಂದಾಗಿ, ಚುನಾವಣಾ ಆಯೋಗದ ನೀತಿ ಸಂಹಿತೆಗಳು ಯಾವತ್ತು ಅಂದರೆ 29ನೇ ತಾರೀಖು ಚುನಾವಣೆಯನ್ನು ಘೋಷಣೆ ಮಾಡಿದರೋ ಇದು ಅಂದಿನಿಂದಲೇ ಕಾರ್ಯಚರಣೆಗೆ ಬಂದಿದೆ ಎಂಬ ಮಾತನ್ನು ಹೇಳಿದ್ದಾರೆ. ಇದು ಹಿಂದೆ ಈ ರೀತಿಯಾಗಿ ಇರಲಿಲ್ಲ, ಈಗ ಚುನಾವಣಾ ಆಯೋಗದವರ ನೀತಿ ಸಂಹಿತೆಗಳನ್ನು ಸರ್ಕಾರವು ಪರಿಪಾಲನೆ ಮಾಡಬೇಕು, ಹೊಸ ಕಾರ್ಯಕ್ರಮಗಳನ್ನಾಗಲಿ ಯಾವುದೇ ಹೊಸ ನೀತಿಗಳಾನ್ನಾಗಲಿ, ಘೋಷಣೆಯನ್ನು ಮಾಡಬಾರದು. ಇದು ನೀತಿ ಸಂಹಿತೆಗಳಲ್ಲಿರತಕ್ಕಂತಹ ಒಂದು ಪ್ರಮುಖವಾದ ಅಂಶವಾಗಿದೆ. ಇದರಿಂದಾಗಿ ನಾವು ಮತ್ತು ನಮ್ಮ ಇತರ ವಿರೋಧ ಪಕ್ಷದವರೆಲ್ಲರೂ ಸಹಿತ ಈ ಒಂದು ಸದನವನ್ನು ಮುಂದಕ್ಕೆ ಹಾಕಬೇಕು. ಮಾರ್ಚ್-31ನೇ ತಾರೀಖಿನೊಳಗಡೆ 4 ತಿಂಗಳೊಳಗೆ ಸರ್ಕಾರದವರು ಎಲ್ಲಾ ಬಾಬುಗಳಲ್ಲಿ ಹಣವನ್ನು ಖರ್ಚುಮಾಡುವುದಕ್ಕೆ ಲೇಖಾನುದಾನಕ್ಕೆ ಅನುಮತಿಯನ್ನು ಈ ಸದನವು ಕೊಟ್ಟಿದೆ. ಇದರಿಂದಾಗಿ ಸರ್ಕಾರದ ಯಾವುದೇ ಕೆಲಸ ಕಾರ್ಯಗಳಿಗೆ ತೊಡಕುಗಳು ಬರುವುದಿಲ್ಲ ಎನ್ನತಕ್ಕಂತಹ ವಿಚಾರವನ್ನು ನಾವು ಸ್ಪಷ್ಟವಾಗಿ ಹೇಳಿದ್ದೇವೆ. ಆದರೆ ಸರ್ಕಾರದವರು ಇಲ್ಲ, ನಾವು ಸದನವನ್ನು ಈ ಸಂದರ್ಭದಲ್ಲಿ ಮುಂದುವರಿಸಬೇಕು ಎಂದು ಅನೇಕ ವಿಚಾರಗಳನ್ನು ಹೇಳಿದರು. ಲೇಖಾನುದಾನವು ಸಾಕಾಗುವುದಿಲ್ಲ. ಮತ್ತೆ ನೀತಿ ಸಂಹಿತೆಯು 10ನೇ ತಾರೀಖಿನಿಂದ ಜಾರಿಗೆ ಬರತಕ್ಕಂಥುದ್ದು, ಮತ್ತು ಚುನಾವಣಾ ಆಯೋಗವು ನಮ್ಮನ್ನು ಕೇಳದೆ, ಚುನಾವಣೆಯನ್ನು ಘೋಷಣೆಯನ್ನು ಮಾಡಿದೆ ಎನ್ನತಕ್ಕಂತಹ ಮಾತನ್ನು ಅವರು ಹೇಳಿದರು. ಇದು ತಮಗೆ ತಿಳಿದಿರುವ ಹಾಗೆ, ಚುನಾವಣಾ ಆಯೋಗವು ಚುನಾ ವಣೆಗಳನ್ನು ಎಲ್ಲಾ ರಾಜ್ಯದ ರಾಜಕೀಯ ಪಕ್ಷಗಳನ್ನು ಕೇಳದೆ, ಸರ್ಕಾರವನ್ನು ಕೇಳದೆ ಚುನಾವಣೆಗಳನ್ನು ಮಾಡುವುದಕ್ಕೆ ಸಾಧ್ಯವೇ ಇಲ್ಲ. ಏಕೆಂದರೆ, ಚುನಾವಣೆಗಳು ನಡೆಯಬೇಕಾದರೆ ಪೋಲೀಸ್ ಹಾಗೂ ರೆವಿನ್ಯೂ ಇಲಾಖೆಗಳು ಬಹಳ ಮುಖ್ಯವಾಗಿರತಕ್ಕಂಥ ಇಲಾಖೆಗಳು, ಅವುಗಳ ಸೇವೆ ಸಿಗುತ್ತದೆಯೋ ಅಥವಾ ಇಲ್ಲವೋ ಎನ್ನತಕ್ಕಂಥದನ್ನು ಚುನಾವಣಾ ಆಯೋಗವು ಕೇಳಿರುತ್ತದೆ. ಮುಖ್ಯಮಂತ್ರಿಗಳು ರಾಜ್ಯದ ಆಡಳಿತ ಪಕ್ಷದ ರಾಜ್ಯ ಘಟಕದ ಅಧ್ಯಕ್ಷರೂ ಹೌದು. ಆದ್ದರಿಂದ

ಅವರಿಗೂ ಸಹ ಈ ವಿಚಾರವು ಗೊತ್ತಿರುತ್ತದೆ. ಕಾಂಗ್ರೆಸ್ ಪಾರ್ಟಿಯಿಂದ ಚುನಾವಣಾ ಆಯೋಗಕರೆದಿರುವಂತಹ ಸಭೆಗೆ ಹೋಗಿ ಭಾಗವಹಿಸಿದ್ದಾರೆ. ಇದರಲ್ಲಿ ನಾವೆಲ್ಲರೂ ಸಹ ಭಾಗವಹಿಸಿದ್ದೇವೆ. ಅವತ್ತಿನಿಂದಲೇ ನೀತಿ ಸಂಹಿತೆಯು ಸಹ ಜಾರಿಗೆ ಬಂದಿದೆ. ಇಂತಹ ಒಂದು ಸನ್ನಿವೇಶದಲ್ಲಿ ನಾವು ಈ ಸದನದಲ್ಲಿ ಕುಳಿತುಕೊಂಡು ಬೇಡಿಕೆಗಳ ಮೇಲೆ ಚರ್ಚೆ ಮಾಡತಕ್ಕಂಥದ್ದು ಅಷ್ಟೊಂದು ಸೂಕ್ತವಾಗಿ ಕಾಣುವುದಿಲ್ಲ. ಇನ್ನು ಎರಡನೆಯದಾಗಿ ಬಹಳ ಮುಖ್ಯವಾಗಿ ನಾವು ಬಿಸಿನೆಸ್ ಅಡ್ವೈಸರಿ ಕಮಿಟಿಯಲ್ಲಿ, ಅಧಿವೇಶನವನ್ನು 5ನೇ ತಾರೀಖಿನವರೆಗೆ ನಡೆಯಲಿ ಚರ್ಚೆ ಮಾಡೋಣ ಎಂದು ನಾವು ಒಪ್ಪಿಕೊಂಡಿದ್ದಾದರೂ ನಮಗೆ ಚುನಾವಣೆಗಳು ಜೂನ್-2ನೇ ತಾರೀಖಿನವರೆಗೆ ನಡೆಯುತ್ತದೆಂದು ನಮಗೆ ಗೊತ್ತಿರಲಿಲ್ಲ. ಆ ಸಂದರ್ಭದಲ್ಲಿ ನಾವು ಇದನ್ನು ಒಪ್ಪಿಕೊಂಡಿದ್ದೇವೆ. ಇದರಿಂದಾಗಿ ನಾವೇನು ತಿಳಿದು ಕೊಂಡಿದ್ದೇವೆಂದರೆ, ಸರ್ಕಾರದವರು ವಿರೋಧಪಕ್ಷದವರ ಒಂದು ಮಾತಿಗೆ ಬೆಲೆ ಕೊಟ್ಟು ಈ ಸದನವನ್ನು ಮುಂದೂಡುತ್ತಾರೆ ಎಂದು ನಾವು ಭಾವಿಸಿಕೊಂಡಿದ್ದೆವು. ಆದರೆ ಕೊನೆಯ ಗಳಿಗೆಯಲ್ಲಿ ನಮ್ಮ ಪ್ರಮುಖ ವಿರೋಧ ಪಕ್ಷದ ಬಿಜೆಪಿಯ ನಾಯಕರು ಹೊರಗಡೆ ಹೋದ ಮೇಲೆ, ನಾವು ಇಟ್ಟಿರತಕ್ಕಂತಹ ಬೇಡಿಕೆಗಳು ಏನಿದೆ, ಅದಕ್ಕೆ ರಿಪ್ಲೈಯನ್ನು ಮಾಡಿದ್ದಾರೆ, ಇದರಲ್ಲಿ ಪ್ರಮುಖವಾಗಿರತಕ್ಕಂಥದ್ದು ಗ್ರಾಮೀಣಾಭಿವೃದ್ಧಿ ಇಲಾಖೆಯದು, ನಿನ್ನೆಯ ದಿವಸವು ಸಹಿತ ರಿಸರ್ವೇಶನ ಬಗ್ಗೆ ಗೆಜೆಟ್ ನೋಟಿಫಿಕೇಶನ್‌ಗಳು ಬದಲಾವಣೆಗಳಾಗುತ್ತಿದೆ. ನಾನು ಮೊನ್ನೆಯ ದಿವಸ ಹಾಸನಕ್ಕೆ ಹೋಗಿದ್ದೆ, ಅಲ್ಲಿ ಎರಡು ಗೆಜೆಟ್ ನೋಟೀಫಿಕೇಶನ್‌ಗಳನ್ನು ಮಾಡಿದ್ದಾರೆ, ನಿನ್ನೆ ಮಂಡ್ಯದಲ್ಲೂ ಸಹಿತ ಎರಡು ಗೆಜೆಟ್ ನೋಟಿಫಿಕೇಶನ್‌ಗಳನ್ನು ಮಾಡಿದ್ದಾರೆ. ಇವತ್ತು ಸಹಿತ ಗೆಜೆಟ್‌ಗಳನ್ನು ಮಾಡುತ್ತಾರೋ ಇಲ್ಲವೋ ಗೊತ್ತಿಲ್ಲ. ಈ ಮೀಸಲಾತಿಯ ಕಾನೂನನ್ನು ಮಾಡಿರುವಂಥದ್ದು ಒಂದು ರೀತಿಯಲ್ಲಿ ರಾಜ್ಯದಲ್ಲಿ ಹಾಸ್ಯಾಸ್ಪದವಾಗಿದೆ; ಇದು ಒಂದು ಭಾಗವಾಗಿದೆ. ಇನ್ನು ಎರಡನೆಯದು ಏನಾಗಿದೆ ಎಂದರೆ, ಯಾವುದೋ ಒಂದು ಆಡಳಿತ ಪಕ್ಷದ ಸಾಂಸ್ಥಿಕ ಚುನಾವಣೆಗಳ ರೀತಿಯಲ್ಲಿ ಈ ಚುನಾವಣೆಗಳನ್ನು ನಡೆಸತಕ್ಕಂಥದ್ದು ನಮಗಂತೂ ಕಂಡುಬರುತ್ತಿದೆ. ಇದರಲ್ಲಿ ಬಹಳ ಪ್ರಮುಖವಾಗಿತಕ್ಕಂತಹ ವಿಚಾರಗಳು ಇದ್ದು ಇದರ ಬಗ್ಗೆ ನಾವು ಸರ್ಕಾರಕ್ಕೆ ಎಚ್ಚರಿಕೆಗಳನ್ನು ಸಹಿತ ಕೊಟ್ಟಿದ್ದೇವೆ. ವಾಂತಿ, ಬೇಧಿ, ಕಾಲರಾ ಪ್ರಾರಂಭವಾಗುತ್ತಿದೆ, ಕುಡಿಯುವ ನೀರಿಗಾಗಿ ಹಾಹಾಕಾರವಾಗುತ್ತಿದೆ. ಇದನ್ನೆಲ್ಲವನ್ನು ನೋಡಬೇಕು, ಅದಕ್ಕೋಸ್ಕರವಾಗಿ ಜನರು ದಂಗೆ ಏಳುತ್ತಾರೆ ಎಂದು ಹೇಳಿದೆ. ಸವಣೂರಿನಲ್ಲಿ ಆಗಿರತಕ್ಕಂತಹ ಘಟನೆಗಳು ಇವತ್ತು ನಮ್ಮ ಕಣ್ಮುಂದೆ ಇವೆ. ಇಂತಹ ಸನ್ನಿವೇಶನದಲ್ಲಿ ಈ ಸರ್ಕಾರವು ಅಧಿಕಾರಿಕ್ಕೆ ಬಂದ ಮೇಲೆ ಯಾವುದೇ ಹೊಸ ಕಾರ್ಯಕ್ರಮಗಳನ್ನು ಹಾಕಿಕೊಂಡು ತರಾತುರಿಯಲ್ಲಿ ಜನಗಳನ್ನು ಆಕರ್ಷಣೆ ಮಾಡತಕ್ಕಂತಹ ಕೆಲಸಗಳು ಆಗಲಿಲ್ಲ. ಬಹಳ ಪ್ರಾಮುಖ್ಯವಾಗಿತಕ್ಕಂತಹ ಗ್ರಾಮೀಣಾಭಿವೃದ್ಧಿ ಇಲಾಖೆಯ ಬಗ್ಗೆ ನಾವು ಚರ್ಚೆಗೆ ಉತ್ತರವನ್ನು ತೆಗೆದುಕೊಂಡು, ಉತ್ತರದ ಮೂಲಕವಾಗಿ ಜನಗಳಿಗೆ ಸಂದೇಶಗಳನ್ನು ಕಳುಹಿಸುವಂಥದ್ದು ಸರಿಯಲ್ಲ. ವಿಕೇಂದ್ರೀಕರಣದ ವ್ಯವಸ್ಥೆ ಏನಿದೆ, ಆ ವ್ಯವಸ್ಥೆಯು ಬಹಳ ಪ್ರಮುಖವಾಗಿರತಕ್ಕಂಥದ್ದು, ಜಲ್ಲಾ ಮಟ್ಟದಲ್ಲಿ ಹಾಗೂ ತಾಲ್ಲೂಕು ಮಟ್ಟದಲ್ಲಿ ಸಮಾನಾಂತರ ಸರ್ಕಾರವನ್ನು ನಡೆಸುವಂತಹ ಚುನಾವಣೆ ಇದು, ಇದು ಪಕ್ಷಾತೀತವಾಗಿ ನಡೆಯುವಂಥದ್ದು. ಯಾವುದೇ ಪಕ್ಷವಿಲ್ಲದೆ ಗ್ರಾಮಪಂಚಾಯತಿ ಚುನಾವಣೆಗಳನ್ನು ನಡೆಸುತ್ತೇವೆಂದು ಹೇಳಿದ್ದೆವು, ಆದರೆ ಅಲ್ಲಿ ನಿಜವಾಗಿ ನಡೆದಿದ್ದಾರೂ ಏನು? ಗ್ರಾಮಪಂಚಾಯತಿ ಚುನಾವಣೆಗಳಲ್ಲಿ ನಮ್ಮ ಪಕ್ಷದ ಕಾರ್ಯಕರ್ತರೇ ಭಾಗವಹಿಸಿದ್ದರು. ಇದು ಪಕ್ಷದ ಸಿಂಬಲ್ ಮೇಲೆ ಚುನಾವಣೆಗಳನ್ನು ಮಾಡುವಂಥದ್ದು, ಆದರಿಂದಾಗಿ ಈ ಸರ್ಕಾರದ ಧೋರಣೆ ಏನಿದೆ, ಇದನ್ನು ನಾವು ಬಹಳ ವಿರೋಧ ಮಾಡುತ್ತೇವೆ, ಇದನ್ನು ನಾವು ಖಂಡಿಸುತ್ತೇವೆ. ಇದರ ಜೊತೆಗೆ ಸರ್ಕಾರದವರು,

ಚುನಾವಣೆ ಇನ್ನು ಕೇವಲ 28 ದಿನಗಳಿರುವಾಗ ಆಡಳಿತ ಪಕ್ಷದ ಶಾಸಕರುಗಳಿಗೆ ಇವತ್ತು ಅಸಕ್ತಿ ಇಲ್ಲ. ಈ ಕಡೆಯಿತರತಕ್ಕಂತಹ ಪಕ್ಷದವರಿಗೂ ನಮ್ಮ ನಮ್ಮ ಕ್ಷೇತ್ರಗಳಲ್ಲಿ ಚುನಾವಣೆ ಬೇಗ ಆಗಿದೆ, ನಾವು ಭಾಗವಹಿಸಲೇ ಬೇಕಾಗಿದೆ. ಆದ್ದರಿಂದ ಆ ದೃಷ್ಟಿಯನ್ನಿಟ್ಟುಕೊಂಡು ನಾವು ಬಹಿಷ್ಕಾರಹಾಕಬೇಕೆನ್ನುವ ತೀರ್ಮಾನ ಮಾಡಿದ್ದೇವೆ. ಮಾನ್ಯ ಅಧ್ಯಕ್ಷರೆ ತಮಗೆ ನಾವು ಅಭಿನಂದನೆಗಳನ್ನು ಸಲ್ಲಿಸುತ್ತೇವೆ. ತಾವು ಕೊನೆಯ ಗಳಿಗೆಯವರೆಗೂ ಸಹಿತ ವಿರೋಧಪಕ್ಷದವರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಸರ್ಕಾರಕ್ಕೆ ಬುದ್ದಿ ಮಾತನ್ನು ಹೇಳಿ ಅಧಿವೇಶವನ್ನು ಮುಂದಕ್ಕೆ ಹಾಕಲಿಕ್ಕೆ ತಾವು ಪ್ರಯತ್ನವನ್ನು ಮಾಡಿದ್ದೀರಿ, ಅದು ಯಶಸ್ವಿಯಾಗಲಿಲ್ಲ, ಆಡಳಿತ ಪಕ್ಷದವರು ಇದನ್ನು ಒಪ್ಪಿಕೊಳ್ಳುವುದಕ್ಕೆ ತಯಾರಿಲ್ಲ, ಈ ಸರ್ಕಾರದ ಧೋರಣೆಯನ್ನು ವಿರೋಧ ಮಾಡಿ, ನಾಡಿದ್ದಿನವರೆಗೂ ನಡೆಯುವಂತಹ ಈ ಅಧಿವೇಶನ ಏನಿದೆ ಇದನ್ನು ನಾವು ಬಹಿಷ್ಕಾರ ಮಾಡುತ್ತೇವೆ. ಈ ಸರ್ಕಾರದ ಧೋರಣೆ ಏನಿದೆ ಇದು ಸರಿಯಲ್ಲ, ಆದರಲ್ಲೂ ತಾಲ್ಲೂಕು ಹಾಗೂ ಜಿಲ್ಲಾ ಪಂಚಾಯತಿ ಚುನಾವಣೆಗಳನ್ನು ನಡೆಸುವಂತಹ ಕ್ರಮ ಏನಿದೆ ಇದು ಆಡಳಿತ ಶೋಭೆಯನ್ನು ತರತಕ್ಕಂತಹ ವಿಚಾರವಲ್ಲ, ಇದು ಅತ್ಯಂತ ಶೋಚನೀಯವಾದ ವಿಚಾರವೆಂದು ಹೇಳುತ್ತಾ ನಾವು ಈ ಸಭೆಗೆ ಬಹಿಷ್ಕಾರವನ್ನು ಹಾಕುತ್ತಿದ್ದೇವೆ.

(ಈ ಹಂತದಲ್ಲಿ ಶ್ರೀ ಪಿ.ಜಿ.ಆರ್.ಸಿಂಧ್ಯಾರವರು ಸಭಾತ್ಯಾಗ ಮಾಡಿದರು)

ಶ್ರೀ ಸಿ.ಬೈರೇಗೌಡ (ವೇಮಗಲ್) : ಮಾನ್ಯ ಅಧ್ಯಕ್ಷರೆ, ನನಗೆ ಬಂದಿರತಕ್ಕಂತಹ ಸುದ್ದಿಯ ಪ್ರಕಾರ ನಿನ್ನೆಯ ದಿವಸ ಕೂಡ ಈ ಮೀಸಲಾಯಿತಿಯನ್ನು ಬದಲಾವಣೆ ಮಾಡುವಂತಹ ಕೆಲಸವನ್ನು ಮಾಡಿದ್ದಾರೆ. ಇದನ್ನು ಯಾವ ಉದ್ದೇಶದಿಂದ ಮಾಡಿದ್ದಾರೆಂದರೆ ಇದು ಪಕ್ಷದ ಆಧಾರದ ಮೇಲೆ ನಡೆಯುವಂತಹ ಚುನಾವಣೆಯಾಗಿದೆ. ನಮ್ಮ ವಿರೋಧಪಕ್ಷಗಳನ್ನು ದಮನ ಮಾಡಬೇಕೆನ್ನುವ ಗುರಿ ಇಟ್ಟುಕೊಂಡೇ ಈ ಘಳಿಗೆಯವರೆಗೂ ಈ ಮೀಸಲಾತಿಯನ್ನು ಬದಲಾವಣೆ ಮಾಡುವಂತಹ ಕೆಲಸವನ್ನು ಮಾಡುತ್ತಿದ್ದಾರೆ. ಇವರಿಗೆ ಪ್ರಜಾಪ್ರಭುತ್ವದಲ್ಲಿ ಎಷ್ಟರಮಟ್ಟಿಗೆ ನಂಬಿಕೆ ಇದೆ, ಇವರಿಗೆ ಇರುವಂತಹ ಅಧಿಕಾರವನ್ನು ಯಾವ ರೀತಿಯಾಗಿ ದುರುಪಯೋಗಪಡಿಸಿಕೊಳ್ಳುತ್ತಿದ್ದಾರೆ, ಚುನಾವಣೆಯು ಪ್ರಾರಂಭವಾಗುವುದಕ್ಕಿಂತ ಮೊದಲೇ ಅಧಿಕಾರವನ್ನು ದುರುಪಯೋಗ ಪಡಿಸಿಕೊ ಳ್ಳುತ್ತಿರುವವರು, ಈಗ ಇನ್ನು 2-3 ದಿವಸಗಳು ಅಧಿವೇಶನ ನಡೆದರೆ, ಇನ್ನೂ ಹೆಚ್ಚಿನ ಅಧಿಕಾರವನ್ನು ದುರುಪಯೋಗ ಪಡಿಸಿಕೊಳ್ಳುವುದರಲ್ಲಿ ನಮಗೆ ಯಾವುದೇ ಸಂಶಯಗಳು ಇಲ್ಲ. ಈ ಸರ್ಕಾರದ ಅಧಿಕಾರದ ದುರಪಯೋಗದ ಧೋರಣೆಯನ್ನು ಪ್ರತಿಭಟಿಸಿ ಬಹಿಷ್ಕಾರ ಹಾಕುವಂತಹ ನಿರ್ಧಾರಕ್ಕೆ ಬಂದಿದ್ದೇವೆ. ಈ ವಿಷಯವನ್ನು ನಾನು ತಮ್ಮ ಗಮನಕ್ಕೆ ತಂದು, ತಾವು ಬಹಳ ಸಹನೆಯಿಂದ, ಸಹಕಾರ ವನ್ನು ನಮಗೆ ನೀಡಿದ್ದೀರಿ, ಅದಕ್ಕೆ ನಾವು ತಮಗೆ ಧನ್ಯವಾದಗಳನ್ನರ್ಪಿಸಿ ನಾವು ಸದನದಿಂದ ಹೊರಗಡೆ ಹೋಗುತ್ತಿದ್ದೇವೆ.

(ಈ ಹಂತದಲ್ಲಿ ಶ್ರೀ ಸಿಬೈರೇಗೌಡರು ಸಭಾತ್ಯಾಗ ಮಾಡಿದರು)

ಶ್ರೀ ಕೆ. ಶ್ರೀನಿವಾಸಗೌಡ (ಕೋಲಾರ) : ಮಾನ್ಯ ಅಧ್ಯಕ್ಷರೆ, ನನ್ನ ಕ್ಷೇತ್ರದಲ್ಲಿ ಮಣಿಘಟ್ಟ ಪಂಚಾಯತಿಯಲ್ಲಿ ಮೊನ್ನೆ ಹೆಣ್ಣು ಮಕ್ಕಳಿಗೆ ಇದ್ದ ರಿಸರ್ವೇಶನ್ನ್ನು ಜಂಟ್ಸ್‌ಗೆ ಎಂದು ಬದಲಾವಣೆ ಮಾಡಿದ್ದಾರೆ. ನನ್ನ ಸ್ವಂತ ಹೋಲೂರು ಹೋಬಳಿಯಲ್ಲಿ ಎಸ್‌ಸಿ(ಲೇಡಿ)ಮೀಸಲಾತಿ ಇರುವುದನ್ನು ಎಸ್‌ಸಿ(ಜಂಟ್ಸ್)ಎಂದು ಮಾಡಿದ್ದಾರೆ ನಿನ್ನೆ ದಿನ ಕಾರಿಜೆಂಡಮ್ ಇಷ್ಯೂ ಮಾಡಿದ್ದಾರೆ. 24ನೇ ತಾರೀಖಿನ ದಿವಸ ಇದನ್ನು ಎಲೆಕ್ಷನ್ ಕಮಿಷನ್‌ಗೆ ಕಳುಹಿಸಿದ್ದೇವೆಂದು ಮಾನ್ಯ ಗ್ರಾಮೀಣಾಭಿವೃದ್ಧಿ ಸಚಿವರು

ಹೇಳಿದ್ದಾರೆ. ಇನ್ನು ಒಂದು ಬದಲಾವಣೆ ಮಾಡುವುದಿಲ್ಲವೆನ್ನುವ ಮಾತನ್ನು ಅವರು ಹೇಳಿದರು. ನಾವು ಅವರ ಮಾತನ್ನು ನಂಬಿದೆವು, ಇವತ್ತು ಕೂಡ ಅವರು ಈ ರೀತಿಯಾಗಿ ಮಾಡುತ್ತಿದ್ದಾರೆ, ಇದು ನಾಚಿಕೆಗೇಡು ಈ ಸರ್ಕಾರದವರು ಎಲೆಕ್ಷನ್ ಕಮೀಷನ್‌ಗೆ ಕಳುಹಿಸಿದರೂ ಕೂಡ ತಿದ್ದೋಲೆ ಮಾಡಿರುವುದು ತಪ್ಪು, ಅದು ಸ್ಪೆಸಿಫಿಕ್ ಆಗಿ ನನ್ನ ಕ್ಷೇತ್ರದಲ್ಲಿ ಎರಡು ಆಗಿದೆ. ಹಿಂದೆ ಒಂದು ಗೆಜೆಟ್ ನೋಟೀಫಿಕೇಷನ್ ಇದೆ, ಈಗ ಒಂದು ಗೆಜೆಟ್ ನೋಟಿಫಿಕೇಷನ್ ಇದೆ. ಎರಡರಲ್ಲೂ ಈ ರೀತಿಯಾಗಿ ಬದಲಾವಣೆಯನ್ನು ಮಾಡಿರುವುದು ನಿಜವಾಗಿಯೂ ಕೂಡ ಸರ್ಕಾರವು ಪ್ರತಿ ಹಂತದಲ್ಲಿಯೂ ಕೂಡ ಕೈಹಾಕಿ ಎಲೆಕ್ಷನ್ ಕಮೀಷನ್ ಪಕ್ಕಕ್ಕೆ ಇಟ್ಟು ಈ ಚುನಾವಣೆಯನ್ನು ಒನ್‌ಸೈಡ್ ಮಾಡಬೇಕೆನ್ನುವ ದೃಷ್ಟಿಯಿಂದ ದುರುಪಯೋಗ ಮಾಡುತ್ತಿದ್ದಾರೆಂದು ಹೇಳಿ ನಾವು ಇದರ ಬಗ್ಗೆ ಪ್ರತಿಭಟನೆಯನ್ನು ಮಾಡಿ ಹೊರಗೆ ಹೋಗುತ್ತಿದ್ದೇವೆ.

(ಈ ಹಂತದಲ್ಲಿ ಶ್ರೀ ಶ್ರೀನಿವಾಸಗೌಡರು ಮತ್ತು ಜನತಾದಳ (ಯು) ಗುಂಪಿನ ಸದಸ್ಯರುಗಳು ಸಭಾತ್ಯಾಗ ಮಾಡಿದರು)

ಶ್ರೀ ಡಿ.ಬಿ. ಚಂದ್ರೇಗೌಡ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು): ಮಾನ್ಯ ಅಧ್ಯಕ್ಷರೆ, I want to put the records straight. ಕನ್ನಡದಲ್ಲಿ ಒಂದು ಮಾತಿದೆ, ''ಒಲ್ಲದ ಗಂಡನಿಗೆ ಮೊಸರಿನಲ್ಲಿ ಕಲ್ಲು ಸಿಕ್ಕಿತು'' ಎನ್ನುವ ಹಾಗೆ ಆಗಿದೆ. ನಿನ್ನೆಯ ದಿನ ಇದರ ಬಗ್ಗೆ ಚರ್ಚೆಯನ್ನು ಮಾಡಿದ್ದೇವೆ, ಅಂತಿಮವಾಗಿ ಸದನವನ್ನು ಮುಂದಕ್ಕೆ ಹಾಕಬೇಕೆನ್ನುವ ಅವರ ವಾದವೇನಿದೆ, ಹೆಚ್ಚು ಕಡಿಮೆ ಸರ್ಕಾರವು ಅದಕ್ಕೆ ಬದ್ಧವಾಗಿದೆ, ಎನ್ನುವ ಮಾತನ್ನು ಹೇಳಿದ್ದೇವೆ. ಅವರು ಇಲ್ಲಿ ಪಾರ್ಟಿಸಿಫೇಟ್ ಮಾಡಿದ್ದರು. ಕಾರಣವೇನೆಂದರೆ, ಯಾವುದೇ ಸಂಸದೀಯ ನಡವಳಿಕೆಗಳ ಪ್ರಕಾರ ಮತ್ತು ನನ್ನ 30 ವರ್ಷಗಳ ಅನುಭವದಲ್ಲಿ ಡಿಮ್ಯಾಂಡ್ಸ್ ಚರ್ಚೆಯಾಗಿ ಉತ್ತರಗಳನ್ನು ಹೇಳುವುದಕ್ಕೆ ಮೊದಲು ಅದನ್ನು ಮುಂದಿನ ಅಧಿವೇಶನಕ್ಕೆ ತೆಗೆದುಕೊಳ್ಳಬೇಕು ಎಂದು ಹೇಳುವಂತದ್ದು ಯಾವ ಸಂಪ್ರದಾಯವು ಅಲ್ಲ. ಇದನ್ನು ನಾವು ಒಪ್ಪಿಕೊಂಡಿದ್ದೇವೆ. ಮಾನ್ಯ ಸಭಾನಾಯಕರು ನಿನ್ನೆ ದಿನ ಇದರ ಬಗ್ಗೆ ಸೂಚ್ಯವಾಗಿ ಹೇಳಿದರು. ಒಂದು ವೇಳೆ ಹಾಗೆ ಮಾಡುವುದಾದರೆ ಆಲೋಚನೆಯನ್ನು ಮಾಡೋಣ ಈಗ ಏನು ಡಿಮ್ಯಾಂಡ್‌ಗಳ ಬಗ್ಗೆ ಚರ್ಚೆಯಾಗಿದೆ ಅದಕ್ಕೆ ಉತ್ತರಗಳನ್ನು ಸಂಬಂಧಪಟ್ಟಂತಹ ಮಂತ್ರಿಗಳು ಹೇಳಲಿ ಆಮೇಲೆ ಸಭೆಯನ್ನು ಏನು ಮಾಡಬೇಕೆಂಬುದರ ಬಗ್ಗೆ ಆಲೋಚನೆಯನ್ನು ಮಾಡುತ್ತೇವೆಂದು ಹೇಳಿದರು. ಇದಕ್ಕೂ ಸಹ ಅವಕಾಶವಿಲ್ಲ ಎಂದರೆ ಶಾಸನಸಭೆಯು ಏತಕ್ಕೆ ಸೇರಬೇಕು ಇವತ್ತು ಸದನ ಸೇರಿರುವಂತಹ ಉದ್ದೇಶವೇ, ಆಯವ್ಯಯವನ್ನು ಏನು ಮಂಡಿಸಿದ್ದೇವೆ ಅದನ್ನು ಪಾಸು ಮಾಡಬೇಕು ಎನ್ನುವ ಉದ್ದೇಶದಿಂದ ಸಭೆಯು ಸೇರಿದೆ, ಆ ಉದ್ದೇಶಕ್ಕೆ ಭಂಗ ಬರುವ ಹಾಗೆ ನಾವು ನಡೆದುಕೊಂಡರೆ ಅದು ಸಂಸದೀಯ ನಡವಳಿಕೆಗಳು ಹೇಗೆ ಆಗುತ್ತದೆ ಎಂದು ತಾವು ಹೇಳಬೇಕು, ನನಗೆ ಗೊತ್ತಿಲ್ಲ.ಸಂಸದೀಯ ನಡವಳಿಕೆಯ ವ್ಯವಹಾರದ ಚೌಕಟ್ಟಿನೊಳಗೆ ಸದನ ನಡೆಯಬೇಕೆನ್ನತಕ್ಕ ಇಚ್ಛೆ ಪ್ರತಿ ಪಕ್ಷದ ಮುಖಂಡರುಗಳಿಗೆ ಇದ್ದಿದ್ದರೆ ಉತ್ತರ ವನ್ನು ಕೇಳಿದೆ ಮೇಲೆ ಕುಳಿತು ಆಲೋಚನೆ ಮಾಡಿ ಏನು ಮಾಡಬಹುದೆಂದು ಸಲಹೆ ಮಾಡಬಹುದಿತ್ತು. ಆದರೆ ಅದಕ್ಕೂ ಅವಕಾಶ ಕೊಡದೆ ಯಾವುದೋ ಕಾರಣವನ್ನು ಹೇಳಿಕೊಂಡು, ಮೀಸಲಾತಿ ಕಾರಣ ಮತ್ತೊಂದು ಕಾರಣ ಹೇಳಿ ಸದನದಿಂದ ಹೊರಗೆ ಹೋಗುವುದು ನನ್ನ ದೃಷ್ಟಿಯಲ್ಲಿ ಅದು ಸಂಸದೀಯ ನಡವಳಿಕೆ ಆಗುವುದಿಲ್ಲವೆಂದು ಅತ್ಯಂತ ಸೌಜನ್ಯದಿಂದ ಈ ಮಾತನ್ನು ಹೇಳಲಿಕ್ಕೆ ಬಯಸುತ್ತೇನೆ. ಮಾನ್ಯ ಮಂತ್ರಿಗಳು ಉತ್ತರ ಕೊಡುವುದಕ್ಕೆ ತಾವು ಅದ್ಯಕ್ಷರು ಅಪ್ಪಣೆ ಕೊಡಬೇಕೆಂದು ಕೇಳುತ್ತೇನೆ.

+ಶ್ರೀ ಮಲ್ಲಿಕಾರ್ಜುನ ಖರ್ಗೆ (ಗೃಹ ಸಚಿವರು): ಮಾನ್ಯ ಅಧ್ಯಕ್ಷರೆ, ನಾನು ವಿಶೇಷವಾಗಿ ಏನೂ ಹೇಳಬೇಕಾಗಿಲ್ಲ. ಈಗಾಗಲೇಲ ಮಾನ್ಯ ಚಂದ್ರೇಗೌಡರು ಹೇಳಿದ್ದಾರೆ. ನನ್ನ ಅಭಿಪ್ರಾಯ ಇಷ್ಟೆ, ಈಗಾಗಲೇ ತಮ್ಮ ಮುಂದೆ ಬಂದು ಅವರು ಏನು ಕೇಳಿಕೊಂಡಿದ್ದರು ಅಂದರೆ ಸದನವನ್ನು ಮುಂದೆ ಹಾಕಬೇಕು. ಕೂಲಂಕುಷವಾಗಿ ಪ್ರತಿಯೊಂದು ಬೇಡಿಕೆಯ ಮೇಲೆ ಚರ್ಚೆ ಮಾಡುವುದಕ್ಕೆ ಆಗುವುದಿಲ್ಲ ಮತ್ತು ಕೆಲವು ಸೂಕ್ತವಾದ ಸಲಹೆಗಳನ್ನು ಕೊಡುತ್ತೇವೆ. ನಮ್ಮ ಸಲಹೆಗಳನ್ನು ತೆಗೆದುಕೊಳ್ಳುವುದಕ್ಕೆ ಅವರಿಗೆ ಅವಕಾಶವಿರುತ್ತದೆ ಅದಕ್ಕಾಗಿ ಸದನವನ್ನು ಮುಂದೆ ಹಾಕಬೇಕೆಂದು ಅವರು ಕೇಳಿಕೊಂಡಿದ್ದರು. ಅದರ ಬಗ್ಗೆ ಮಾತುಕತೆ ನಡೆಯಿತು. ಅದು ತಮಗೆ ಗೊತ್ತಿದೆ. ಮಾತುಕತೆ ನಡೆದು ಕೊನೆಗೆ ಒಂದು ಅಭಿಪ್ರಾಯಕ್ಕೆ ಬಂದರು. ಮಾನ್ಯ ಮುಖ್ಯಮಂತ್ರಿಯವರು ಇದರ ಬಗ್ಗೆ ಸ್ಪಂದಿಸಬೇಕೆಂದು ಮಾನ್ಯ ಸಿಂಧ್ಯಾರವರು ಕೇಳಿಕೊಂಡರು. ಅವರು ಕೇಳಿಕೊಂಡ ತಕ್ಷಣ ಮಾನ್ಯ ಮುಖ್ಯಮಂತ್ರಿಗಳು ಎದ್ದುನಿಂತು ಹೇಳಿದರು, ಈಗಾಗಲೇ ಎಂಟು ಡಿಮಾಂಡ್‌ಗಳ ಬಗ್ಗೆ ಪೂರ್ತಿಯಾಗಿ ಚರ್ಚೆಯಾಗಿದೆ, ಕೇವಲ ಉತ್ತರ ಕೊಡತಕ್ಕದ್ದು ಮಾತ್ರ ಬಾಕಿಯಿದೆ. ತಾವು ದಯವಿಟ್ಟು ಈ ಉತ್ತರವನ್ನು ಕೇಳಿ, ಈ ಡಿಮಾಂಡ್‌ಗಳಿಗೆ ತಾವು ಒಪ್ಪಿಗೆಯನ್ನು ಕೊಟ್ಟು ತದನಂತರ ಉಳಿದ ಡಿಮಾಂ ಡ್‌ಗಳ ಮೇಲೆ ಬೇಕಾದರೆ ಜೂನ್ 12ನೇ ತಾರೀಖು ಮತ್ತೆ ಸಭೆಸೇರೋಣವೆನ್ನುವ ಅಭಿ ಪ್ರಾಯವನ್ನು ಮುಖ್ಯಮಂತ್ರಿಗಳು ಹೇಳಿದರು. ತಾವು ಕೂಡ ತಮ್ಮ ಕೊಠಡಿಗೆ ಕರೆಸಿ ಕೇಳಿದಾಗ, ನಮ್ಮ ನಿಲುವೇನು ಎನ್ನುವ ಬಗ್ಗೆ ವಿರೋಧಪಕ್ಷದ ನಾಯಕರಾದ ಶೆಟ್ಟರ್‌ರವರು, ಸಿಂಧ್ಯಾರವರು ಮತ್ತು ಭೈರೇಗೌಡರು ಎಲ್ಲರೂ ಕೂಡ ಕೇಳಿದಾಗ ನಾನು ಸ್ಪಷ್ಟಪಡಿಸಿದೆ. ಮುಖ್ಯಮಂತ್ರಿಗಳ ಅಭಿಪ್ರಾಯ ಹೀಗಿದೆ ಉಳಿ ದಂತಹ ಡಿಮಾಂಡ್‌ಗಳನ್ನು ಜೂನ್ 12ನೇ ತಾರೀಖು ತೆಗೆದುಕೊಳ್ಳಬಹುದು ಎನ್ನುವ ಅಭಿಪ್ರಾಯ ವನ್ನು ಕೊಟ್ಟಿದ್ದಾರೆ. ತಾವು ಚರ್ಚೆಯನ್ನು ಮುಂದುವರಿಸಬಹುದು, ಈಗ 8ಕ್ಕೆ ಮಾತ್ರ ಉತ್ತರ ಸೀಮಿತ ಇರುತ್ತದೆ ಈ ಡಿಮಾಂಡ್‌ಗಳ ಬಗ್ಗೆ ಉತ್ತರ ಕೇಳಿದ ಮೇಲೆ ಅವುಗಳನ್ನು ಪಾಸ್ ಮಾಡಿ ಮುಕ್ತಾಯ ಮಾಡೋಣವೆಂದು ಹೇಳಿದ್ದೇನೆ. ಇದರಲ್ಲಿ ತಪ್ಪೇನು ಇದೆ? ಅವರ ಮಾತನ್ನು ನಾವು ಒಪ್ಪಿಕೊಂಡು ಅವರ ಮಾತಿಗೆ ಮನ್ನಣೆ ಕೊಟ್ಟು ಅವರು ಒಪ್ಪಿಗೆಯನ್ನು ಕೊಟ್ಟಮೇಲೆ ಇದು ಮರ್ಯಾದೆ ಪ್ರಶ್ನೆ ಎನ್ನತಕ್ಕ ದೃಷ್ಟಿಯಿಂದ ಅವರು ಸದನದಿಂದ ಹೊರಗೆ ಹೋದರೆ ಜನರ ಬೇಡಿಕೆಗೆ, ಜನರ ಅಪೇಕ್ಷೆಗೆ ತಕ್ಕಂತೆ ಅವರು ನಡೆದುಕೊಂಡ ಹಾಗೆ ಆಗುತ್ತದೆಯೇ? ಇವತ್ತು ನಾವು ಕೇಳುತ್ತೇನೆ, ನಾವು ಜನರ ಸಮಸ್ಯೆಗಳನ್ನು ಸದನದ ಮುಂದಿಡಬೇಕು, ಸದನದ ಮುಖಾಂತರ ನಾವು ಜನರಿಗೆ ತಿಳಿಯ ಹೇಳಬೇಕು ಆಮೇಲೆ ಕೆಲವು ಡಿಮಾಂಡ್‌ಗಳ ಮೇಲೆ ಮಾತನಾಡಿ ಸಲಹೆ ಕೊಡಬೇಕು ಎನ್ನತಕ್ಕ ಅವರ ಹೇಳಿಕೆಗೆ ಸ್ಪಂದಿಸಿ ಸರ್ಕಾರ ಒಪ್ಪಿಗೆ ಕೊಡತಕ್ಕ ಕೆಲಸ ಮಾಡಿದೆ. ಮತ್ತೆ ಪುನಃ ಇಲ್ಲಾ ನಾವು ಒಂದು ಸಾರಿ ಹೀಗೆ ಹೇಳಿದ್ದೇವೆ, ನಾವು ಪುನಃ ಬಂದರೆ ಚೆನ್ನಾಗಿರುವುದಿಲ್ಲ ಹಾಗೆ ಇರುವುದಿಲ್ಲ, ಎಂದು ಹೇಳಿದರೆ ಇದಕ್ಕೆ ನಾವೇನು ಮಾಡುವುದಕ್ಕೆ ಆಗುತ್ತದೆ? ಅಂದರೆ ಇದರ ಅರ್ಥವೇನೆಂದರೆ, ಅವರಿಗೆ ಡಿಮಾಂಡ್‌ಗಳ ಮೇಲೆ ಚರ್ಚೆ ಮಾಡುವುದಕ್ಕೆ ಇಷ್ಟವಿಲ್ಲ. ಕೇವಲ ರಾಜಕೀಯ ಉದ್ದೇಶದಿಂದ ಹೊರಗಡೆ ಪೊಲಿಟಿಸೈಸ್ ಮಾಡುವುದು ನೋಡಿ ಸರ್ಕಾರದವರು ಡಿಮಾಂಡ್ಸ್ ಮೇಲೆ ಚರ್ಚೆ ಮಾಡುವುದಕ್ಕೆ ಅವಕಾಶ ಮಾಡಿಕೊಟ್ಟಿಲ್ಲ, ಹೀಗೆ ಹೇಳುವುದು, ತಮಗೆ ಗೊತ್ತಿದೆ, ಅವರೆಲ್ಲರೂ ಸೇರಿ ಮೊದಲು ; ಏಪ್ರಿಲ್ 28ರವರೆಗೆ ಸದನ ನಡೆಯಬೇಕೆಂದು ನಿಗದಿ ಮಾಡಲಾಗಿತ್ತು. ತದನಂತರ 28ನೇ ತಾರೀಖಿನೊಳಗಡೆ ಯಾವ ಡಿಮಾಂಡ್ಸ್ ಕೂಡ ಮುಗಿಯುವುದಿಲ್ಲ, ಇನ್ನು ಸ್ವಲ್ಪ ಹೆಚ್ಚು ಸಮಯ ಕೊಡಬೇಕೆಂದು ಕೇಳಿಕೊಂಡಾಗ ಮೇ 5ನೇ ತಾರೀಖಿನವರೆಗೆ ಸದನ ನಡೆಸಲಿಕ್ಕೆ ತೀರ್ಮಾನ ಮಾಡಲಾಯಿತು. 5ನೇ ತಾರೀಖಿನವರೆಗೆ ಸದನ ನಡೆಸುವಾಗ, ಈ ಸದನದ ಪ್ರತಿಯೊಬ್ಬ

ಸದಸ್ಯರಿಗೂ ಕೂಡ ಗೊತ್ತಿತ್ತು ಜೂನ್‌ನಲ್ಲಿ ತಾಲ್ಲೂಕು ಮತ್ತು ಜಿಲ್ಲಾ ಪಂಚಾಯಿತಿಗಳ ಚುನಾವಣೆ ನಡೆಯುತ್ತದೆಂದು. ಇದನ್ನು ಒಂದು ಸಲ ಅಲ್ಲ, ಅನೇಕ ಸಾರಿ ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದಾರೆ, ಮಾನ್ಯ ಪಂಚಾಯತ್ ರಾಜ್ ಸಚಿವರಾದ ಘೋರ್ಪಡೆಯವರು ಹೇಳಿದ್ದಾರೆ ಎಲ್ಲರೂ ಕೂಡ ಈ ವಾದವನ್ನು ಇಟ್ಟು ಚುನಾವಣೆಯನ್ನು ಮಾಡೇ ಮಾಡುತ್ತೇವೆ, ಮೇ ಅಂತ್ಯದಲ್ಲಿ ಅಥವಾ ಜೂನ್ ತಿಂಗಳಲ್ಲಿ ಚುನಾವಣೆಗಳು ಆಗುತ್ತವೆ ಎನ್ನುವ ಮಾತನ್ನು ಒಂದಲ್ಲ ಅನೇಕ ಸಾರಿ ಸದನದ ಮುಖಾಂತರ ಹೊರಗಡೆ ಒಳಗಡೆ ಹೇಳಿದ್ದೇವೆ. ಇದು ಗೊತ್ತಿದ್ದು ಕೂಡ, ನಮಗೆ ಚುನಾವಣೆ ಜೂನ್ 2ನೇ ತಾರೀಖು 6ನೇ ತಾರೀಖು ಬರುತ್ತದೆಂದು ಗೊತ್ತಿರಲಿಲ್ಲವೆನ್ನುವ ಈ ಸಬೂಬು ಹೇಳಿಕೊಂಡು ಡಿಮಾಂಡ್‌ಗಳ ಮೇಲೆ ಚರ್ಚೆ ಇಲ್ಲದೆ ಪಾಸ್ ಮಾಡಿಕೊಂಡರು ಎಂದು ಹೊರಗಡೆ ಹೇಳಿಕೊಳ್ಳಲಿಕ್ಕೆ, ನೋಡಿ ನಮಗೆ ಅವಕಾಶ ಕೊಡಲಿಲ್ಲ ಅವರಿಗೆ ಭಾರೀ ಮೆಜಾರಿಟಿ ಇದೆಯೆಂದು ಹೇಳಿ, ನಮ್ಮ ಎಲ್ಲಾ ಒಪೀನಿಯನ್ಸ್‌ಗಳನ್ನು ಸಪ್ರೆಸ್ ಮಾಡತಕ್ಕ ಪ್ರಯತ್ನವನ್ನು ಸರ್ಕಾರ ಮಾಡಿದೆ, ಆ ತರಹ ಅಭಿಪ್ರಾಯ ಮೂಡಿಸುವುದಕ್ಕೋಸ್ಕರ ಹೊರಗೆ ಹೋದರೆ ಅಷ್ಟೊಂದು ಸಮಂಜಸವಾಗುವುದಿಲ್ಲ. ಇದರಲ್ಲಿ ನಮ್ಮ ಕರ್ತವ್ಯ ಚ್ಯುತಿ ಆಗುತ್ತಿದೆಯೆಂದು ನನಗನ್ನಿಸುತ್ತದೆ. ನಾವು ಸರ್ಕಾರದವರು ಸಿದ್ದರಿದ್ದೇವೆಂದು ಮೊದಲೇ ಹೇಳಿದ್ದೇವೆ. ಜೂನ್ 5ನೇ ತಾರೀಖು ಅಲ್ಲ 8ನೇ ತಾರೀಖಿನವರೆಗೆ ಕುಳಿತುಸಭೆ ನಡೆಸೋಣವೆಂದು ಹೇಳಿದ್ದೇವೆ. 8ನೇ ತಾರೀಖು ಅವರು ಒಪ್ಪಲಿಲ್ಲವೆಂದರೆ, ಜೂನ್ 12ನೇ ತಾರಿಖಿಗೆ ಪೋಸ್ಟ್ ಪೋನ್ ಮಾಡೋಣವೆಂದು ಹೇಳಿದ್ದೇವೆ. ಎಲ್ಲಾ ರೀತಿಯಿಂದ ಸರ್ಕಾರ ಸಹಕಾರ ಕೊಡುವುದಕ್ಕೆ ಸಿದ್ಧವಿದೆ. ನಾವು ಅವರ ಎಲ್ಲಾ ಮಾತಿಗೆ ಮನ್ನಣೆ ಕೊಟ್ಟಿದ್ದೇವೆ. ಆದರೂ ಕೂಡ ಅವರು ರಾಜಕೀಯ ಮಾಡಬೇಕೆನ್ನುವ ದೃಷ್ಟಿಯಿಂದಲೇ ಈ ಒಂದು ಇಷ್ಯೂ ರೈಸ್ ಮಾಡಿ ಹೊರಗೆ ಹೋಗತಕ್ಕದ್ದು ಸರಿಯಲ್ಲ. ಆಮೇಲೆ ಪಂಚಾಯತ್ ರಾಜ್ ಬಿಲ್ ಮೇಲೆ ಸಾಕಷ್ಟು ಮಾತನಾಡಿದರು. ಒಂದು ಸಲ ಅಲ್ಲ ಎರಡು ವಾಕ್ ಔಟ್ ಮಾಡಿದರು. ರಾಜಭವನದವರೆಗೆ ಹೋಗಿ ಬಂದರು. ಆಮೇಲೆ ತೆಗೆದುಕೊಂಡು ಬಂದಿರ ತಕ್ಕ ನೋಟೀಫಿಕೇಶನ್ ಚೆನ್ನಾಗಿಲ್ಲವೆಂದು ಹೇಳಿ ಇಲ್ಲಿ ಅನೇಕ ಸಾರಿ ಪ್ರಸ್ತಾಪ ಮಾಡಿದರು. ಅದಕ್ಕೆ ಉತ್ತರವನ್ನು ಮಾನ್ಯ ಸಚಿವರು ಕೊಟ್ಟರು. ಅದು ಹೋಗಲಿ, ಪುನಃ ಹೋಗುತ್ತಾ ಹೋಗುತ್ತಾ ನಿಮ್ಮ ನೋಟೀಫಿಕೇಶನ್ ಚೆನ್ನಾಗಿಲ್ಲ, ನಿಮ್ಮ ರಿಸರ್ವೇಶನ್ ಚೆನ್ನಾಗಿಲ್ಲ ವೆಂದು ನೀವು ಕಾರಿಜೆಂಡಮ್ ಇಷ್ಯೂ ಮಾಡಿದಿರಿ. ಹೀಗೆ ಅನೇಕ ಸಾರಿ ಕಾರಿಜೆಂಡಮ್ ಇಷ್ಟೂ ಮಾಡುತ್ತಿದ್ದೀರಿ ಎಂದೆಲ್ಲ ಹೇಳಿದರು. ಇದರಿಂದ ಯಾವುದು ತಪ್ಪು ಯಾವುದು ಸರಿ ಎಂದು ಗೊತ್ತಾಗುತ್ತದೆ. ರಾಯಚೂರಿನಲ್ಲಿ ಏನಾಗಿತ್ತು ಅಂದರೆ ಎಸ್‌ಸಿ ಪಾಪ್ಯುಲೇಷನ್ ಎಸ್‌ಟಿಗೆ ಆಗಿತ್ತು ಎಸ್‌ಟಿ ಪಾಪ್ಯುಲೇಷನ್ ಎಸ್‌ಸಿಗೆ ಆಗಿತ್ತು. ಇಂತಹ ಘಟನೆಗಳು ಕೆಲವು ಕಡೆ ನಡೆದಾಗ ಜೆನ್ಯುಯನ್ ತಿದ್ದುಪಡಿಯಾದರೆ ಅದರಲ್ಲಿ ತಪ್ಪೇನು ಇದೆ? ಇವು ದುರುದ್ದೇಶದಿಂದ ಮಾಡಿದಂತಹವುಗಳಲ್ಲ. ಸದುದ್ದೇಶದಿಂದ ಜನರಿಗೆ ಸಹಾಯವಾಗಲಿ, ಯಾವ ಜನಸಂಖ್ಯೆಯ ಜನ ಎಲ್ಲಿ ಹೆಚ್ಚಾಗಿದ್ದಾರೆ ಅದನ್ನು ನೋಡಿಕೊಂಡು ಮಾಡಬೇಕೆನ್ನತಕ್ಕ ದೃಷ್ಟಿಯಿಂದ ಮಾಡಿದ್ದನ್ನು, ಅದಕ್ಕೂ ಕೂಡ ಈ ಒಂದು ಇಷ್ಯೂವನ್ನು ಹೇಳಿಕೊಂಡು ಸದನದಿಂದ ವಾಕ್ ಔಟ್ ಮಾಡುವುದು. ಅಂದರೆ ಇದರ ಅರ್ಥವೇನು? ಡಿಮಾಂಡ್ ಬಗ್ಗೆ ಚಿಂತೆಯಿಲ್ಲ. ಅಥವ ಜನರ ಸಮಸ್ಯೆ ಬಗ್ಗೆ ಚಿಂತೆಯಿಲ್ಲ. ಇವತ್ತು ಕುಡಿಯುವ ನೀರಿನ ಬಗ್ಗೆ ಚರ್ಚೆ ಮಾಡುತ್ತಾರೆಂದು ಅಪೇಕ್ಷಪಟ್ಟಿದ್ದೆವು. ಅದರ ಬಗ್ಗೆ ಚರ್ಚೆಯಿಲ್ಲ. ಕೇಂದ್ರ ಸರ್ಕಾರದಿಂದ ಬರಬಾಲದ ಬಗ್ಗೆ ಬರತಕ್ಕ ಹಣದ ಬಗ್ಗೆ ಏನಾದರೂ ಹೇಳುತ್ತಾರೆಂದು ನೋಡಿದರೆ ಅದರ ಬಗ್ಗೆ ಚರ್ಚೆ ಇಲ್ಲ. ಇವು ಯಾವುದರ ಬಗ್ಗೆಯೂ ಅವರು ಸ್ಪಂದಿಸಲಿಲ್ಲ. ಕೇವಲ ಚುನಾವಣೆಯ ದೃಷ್ಟಿಕೋನವನ್ನು ಇಟ್ಟುಕೊಂಡು ಇವತ್ತಿನ ದಿವಸ ವಾಕ್ ಔಟ್ ಮಾಡಿದ್ದಾರೆ. ಇದರ ಬಗ್ಗೆ ರಾಜ್ಯದ

ಜನತೆಗೆ ಈ ತೀರ್ಮಾನವನ್ನು ಬಿಟ್ಟಿದ್ದೇವೆ. ಜನ ಚುನಾವಣೆಯಲ್ಲಿ ತೀರ್ಮಾನ ಮಾಡುತ್ತಾರೆ. ಯಾರು ಕರೆಕ್ಟ್ ಸ್ಟ್ಯಾಂಡ್ ತೆಗೆದುಕೊಂಡಿದ್ದರು, ವಿರೋಧಪಕ್ಷದವರು ಯಾವ ರೀತಿಯಾಗಿ ನಡೆದುಕೊಂಡರು ಎನ್ನುವ ಬಗ್ಗೆ ಜನ ತೀರ್ಮಾನ ಮಾಡುತ್ತಾರೆ. ನಾವು ಮಾತ್ರ ಸ್ಪಷ್ಟವಾಗಿ ಹೇಳಿದ್ದೇವೆ ಇವತ್ತು ಕೂಡ ಸಿದ್ಧರಿದ್ದೇವೆ. ನಾನು ಪುನಃ ಅವರಲ್ಲಿ ಅಪೀಲ್ ಮಾಡಿಕೊಳ್ಳುತ್ತೇನೆ, ಅವರು ಪುನಃ ಒಳಗಡೆ ಬಂದ ಮೇಲೆ ನಾವು ಸಂಧಾನ ನಡೆಸಿ ನಾವು ಎಂಟು ಡಿಮಾಂಡ್‌ಗಳನ್ನು ಪಾಸ್ ಮಾಡಿದ ತಕ್ಷಣ ಬೇಕಾದರೆ ಸದನವನ್ನು ಮುಂದಕ್ಕೆ ಹಾಕಲಿಕ್ಕೆ ತಯಾರಿದ್ದೇವೆ. ಉಳಿದಂತಹ ಡಿಮಾಂಡ್‌ಗಳನ್ನು ಜೂನ್ 12ನೇ ತಾರೀಖಿ ತೆಗೆದುಕೊಳ್ಳಲಿಕ್ಕೆ ಸಿದ್ಧರಿದ್ದೇವೆ.

+ಶ್ರೀ ವೈ.ಕೆ. ರಾಮಯ್ಯ (ಹುಲಿಯೂರು ದುರ್ಗ) : ಮಾನ್ಯ ಅಧ್ಯಕ್ಷರೆ, ಕಳೆದ ವಾರವೆಲ್ಲ ಚುನಾವಣೆಗಳಲ್ಲಿ ಮೀಸಲಾತಿ ಎಷ್ಟಿರಬೇಕು ಹೇಗಿರಬೇಕೆನ್ನುವುದರ ಬಗ್ಗೆ ಚರ್ಚೆ ನಡೆಯಿತು. ನಾನು ತಮ್ಮ ಮುಖಾಂತರ ವಿರೋಧ ಪಕ್ಷದವರಿಗೆ ಮತ್ತು ಸ್ನೇಹಿತರಿಗೆ ಹೇಳುವುದಕ್ಕೆ ಇಷ್ಟಪಡುತ್ತೇನೆ. ಬೇಕೋ ಬೇಡವೋ ನಾವೆಲ್ಲ ಪಕ್ಷ ರಾಜಕಾರಣದ ರಾಜಕೀಯ ವ್ಯವಸ್ಥೆಯನ್ನು ಒಪ್ಪಿಕೊಂಡಿದ್ದೇವೆ. ಈ ವ್ಯವಸ್ಥೆಯಲ್ಲಿ ಮೀಸಲಾತಿ ಎಲ್ಲಿ ಎಷ್ಟಿರಬೇಕು ಎನ್ನುವಂತಹ ತೀರ್ಮಾನ ಮಾಡುವಂತಹ ಅಧಿಕಾರ ಸರ್ಕಾರಕ್ಕೆ ಇದೆಯೇ ಹೊರತು ಚುನಾವಣಾ ಆಯೋಗಕ್ಕೆ ಇಲ್ಲ. It is preprogative of the government to decide about the reservation and not the Election Commission. ಇದು ಗೊತ್ತಿದ್ದು ಕೂಡ ಅನಾವಶ್ಯಕವಾಗಿ ಒಂದುವಾರ ಕಾಲ ಸದನದ ಸಮಯವನ್ನು ಅವರು ಹಾಳು ಮಾಡಿದ್ದಾರೆ. ನಾನು ತಮ್ಮ ಮುಖಾಂತರ ವಿರೋಧಪಕ್ಷದ ನನ್ನ ಸ್ನೇಹಿತರಿಗೆ ಹೇಳುತ್ತೇನೆ ನಾನಲ್ಲ, ರಾಜ್ಯದ ಜನ ನಿರೀಕ್ಷೆ ಮಾಡುತ್ತಾರೆ ಕುಡಿಯುವುದಕ್ಕೆ ನೀರಿಲ್ಲ, ಸವಣೂರಿನಲ್ಲಿ ಅದದ್ದು ನಾಳೆ ಕುಣಿಗಲ್‌ನಲ್ಲಿ ಆಗುತ್ತದೆ ಚಿಂತಾಮಣಿಯಲ್ಲಾಗುತ್ತದೆ. ಬರಗಾಲ ಕೇವಲ ಮಧ್ಯಪ್ರದೇಶದಲ್ಲಿ ಸಿಲ್ಲುವುದಿಲ್ಲ ಸ್ವಾಮಿ. ಕುಡಿಯುವ ನೀರಿನ ಬರ, ಕುಡಿಯುವ ನೀರಿಗಾಗಿ ಎದ್ದಿರುವಂತಹ ಹಾಹಾಕಾರ ಕೇವಲ ಗುಜರಾತಿಗೆ ಸೀಮಿತವಾಗುವುದಿಲ್ಲ. ಪತ್ರಿಕೆಗಳ ವರದಿ ಪ್ರಕಾರ, ತಜ್ಞರ ಅಭಿಪ್ರಾಯದ ಪ್ರಕಾರ ಜಲಬತ್ತುತಿರುವುದು, ಕಾಡು ನಾಶವಾಗುತ್ತಿರುವುದು, ಕೆರೆಗಳಲ್ಲಿ ಹೂಳು ತುಂಬಿಕೊಳ್ಳುತ್ತಿರುವುದು ಇಡೀ ರಾಷ್ಟ್ರದ ಸಮಸ್ಯೆಯಾಗುತ್ತದೆ. ಇವತ್ತು ನಾವು ಗುಜರಾತಿನಲ್ಲಿ ಏನು ನೋಡುತ್ತಿದ್ದೇವೋಯ ಅದನ್ನು ನಾಳೆ ಕರ್ನಾಟಕದಲ್ಲಿ ನೋಡಬೇಕಾಗುತ್ತದೆ. ಇಂತಹ ಸಮಸ್ಯೆಗಳನ್ನು ಚರ್ಚೆ ಮಾಡುವುದನ್ನು ಬಿಟ್ಟು ಒಂದು ವಾರ ಕಾಲ ಕೇವಲ ಕೆಲಸ ಬಾರದ ಮೀಸಲಾತಿಯ ವಿಷಯದಲ್ಲಿ ಚರ್ಚೆ ಮಾಡುವುದಕ್ಕೆ ತಾವು ಅವಕಾಶ ಮಾಡಿಕೊಟ್ಟಿರಿ. ನಾನು ಸುಮ್ಮನೆ ಕುಳಿತುಕೊಂಡು ಕೇಳುತ್ತಿದ್ದೆ. ಇವತ್ತು ನಿನ್ನೆಯಿಂದ ಈ ಸದನದ ನಡೆಯಬೇಕೇ ಬೇಡವೇ ಅನ್ನುವಂತಹ ಕೆಲಸಕ್ಕೆ ಬಾರದ ವಿಷಯವನ್ನು ಚರ್ಚೆ ಮಾಡುವುದಕ್ಕೆ ತಾವು ಈ ಸದನದಲ್ಲಿ ಅವಕಾಶ ಮಾಡಿಕೊಟ್ಟಿದ್ದೀರಿ. ಈ ರಾಜ್ಯದ ಜನತೆಗೆ ಪರವಾಗಿ ತಮ್ಮಲ್ಲಿ ನನ್ನ ಅರಿಕೆ ಇಷ್ಟೆ. ಈ ಪಕ್ಷವೋ ಆ ಪಕ್ಷವೋ ನನಗೆ ಗೊತ್ತಿಲ್ಲ. ಈ ಸದನದ ಸಮಯ ಈ ರಾಜ್ಯದ ಜನರು ದುಃಖ ದುಮ್ಮಾನಗಳ ಬಗ್ಗೆ, ಕಷ್ಟಕಾರ್ಪಣ್ಯಗಳ ಬಗ್ಗೆ, ಅವರ ಸಮಸ್ಯೆಗಳನ್ನು ಬಗೆಹರಿಸುವ ಬಗ್ಗೆ ಚರ್ಚೆ ಮಾಡುವುದಕ್ಕೆ ಸೀಮಿತವಾಗಬೇಕೇ ಹೊರತಾಗಿ ಅನಾವಶ್ಯಕ ವಿಷಯಗಳನ್ನು, ಕೇವಲ ಬಾಯಿ ಚಪಲ ತೀರಿಸಿಕೊಳ್ಳುವುದಕ್ಕೆ, ಭಾಷಣ ಮಾಡುವುದಕ್ಕೆ ಉಪಯೋಗಿಸಿಕೊಳ್ಳುವುದಕ್ಕೆ ತಾವು ಅವಕಾಶ ಮಾಡಿಕೊಡದೆ ಜನರ ಸಮಸ್ಯೆಗಳನ್ನು ಪರಿಹಾರ ಮಾಡುವಂಥಾದ್ದು, ಉದಾಹರಣೆಗೆ ಕುಡಿಯುವ ನೀರಿನ ಸಮಸ್ಯೆ. ಇಂಥಾದ್ದರ ಬಗ್ಗೆ ಚರ್ಚೆ ಮಾಡುವುದಕ್ಕೆ ನೀವು ನಿರ್ದಿಷ್ಟವಾದ ತೀರ್ಮಾನವನ್ನು ಕೊಟ್ಟು ಅದಕ್ಕೆ

ಕಾಲಾವಕಾಶವನ್ನು ಮಾಡಿಕೊಟ್ಟು ನಾವು ಇಲ್ಲಿ ಕುಳಿತು ಕೊಳ್ಳುವುದರ ಬಗ್ಗೆ ಸಾರ್ಥಕತೆ ಆಗಲಿ. ಜನರು ನಮ್ಮನ್ನು ನೋಡುತ್ತಿದ್ದಾರೆ. ಊರಿಗೆ ಹೋಗುತ್ತಿದ್ದ ಹಾಗೆ ಏಕೆ ಹೋಗಿದ್ದೀರಿ ಎಂದು ನಮ್ಮನ್ನು ಅವರು ಕೇಳುತ್ತಾರೆ. ಇವತ್ತು ಬೆಳಿಗ್ಗೆಯಿಂದ ಸಂಜೆವರಿಗೆ ಏನು ಮಾಡಿದ್ದೀರಿ ಎಂದು ಕೇಳುತ್ತಾರೆ. ನಾವು ಹೋಗಿ ಹೇಳಬೇಕಾಗುತ್ತದೆ ಇಲ್ಲಪ್ಪ ನಿಮ್ಮ ಕುಡಿಯುವ ನೀರಿನ ಬಗ್ಗೆ ಇವತ್ತು ಹೇಳಿದ್ದೇವೆ, ವಿದ್ಯುಚ್ಛಕ್ತಿ ಬಗ್ಗೆ ಹೇಳಿದ್ದೇವೆ, ನಿಮ್ಮ ಕೆರೆಗಳ ಬಗ್ಗೆ ಹೇಳಿದ್ದೇವೆ, ಒಡೆದುಹೋಗಿರುವ ನಿಮ್ಮ ಕಾಲುವೆ ಬಗ್ಗೆ ಹೇಳಿದ್ದೇವೆ ಎಂದು ಹೇಳಬೇಕಾಗುತ್ತದೆ. ಅದು ಬಿಟ್ಟು ಈ ಸದನ ನಡೆಸಬೇಕೇಬೇಡವೇ ಎಂದು ತೀರ್ಮಾನ ಮಾಡುವುದಕ್ಕೆ ಎರಡು ದಿವಸ ಕಾಲಾವಕಾಶ ಕೊಟ್ಟರೆ ಹೇಗೆ ಸ್ವಾಮಿ? ಅದಕ್ಕಾಗಿ ನಾನು ತಮ್ಮಲ್ಲಿ ಅನನ್ಯವಾಗಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಇನ್ನು ಮುಂದೆ ತಾವು ಬಹಳ ಬಿಕ್ಕಟ್ಟಿನಿಂದ, ಕಟ್ಟುನಿಟ್ಟಾಗಿ ಕೆಲಸಕ್ಕೆ ಬಾರದೇ ಇರುವ ವಿಷಯಗಳನ್ನು ಚರ್ಚೆ ಮಾಡುವುದಕ್ಕೆ ಅವಕಾಶ ಮಾಡಿಕೊಡಕೂಡದು ಎಂದು ಈ ರಾಜ್ಯದ ಜನತೆಯ ಪರವಾಗಿ ಪ್ರಾರ್ಥನೆ ಮಾಡಿಕೊಂಡು ನನ್ನ ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು : ಜಯಪ್ರಕಾಶ್ ಹೆಗಡೆಯವರೇ ಬೇಗ ಮುಗಿಸಿ.

+ಶ್ರೀ ಕೆ. ಜಯಪ್ರಕಾಶ್ ಹೆಗಡೆ (ಬ್ರಹ್ಮಾವರ) : ಮಾನ್ಯಅಧ್ಯಕ್ಷರೆ, ನಿನ್ನೆ ನಾನು ಬಂದಿರಲಿಲ್ಲ. ಮಾನ್ಯ ಚಂದ್ರೇಗೌಡರು ನಿನ್ನೆ ಒಂದು ಮಾತನ್ನು ಹೇಳಿದ್ದಾರೆ. ಪ್ರಿಸಿಡೆಂಟ್ ಇಲ್ಲ, ಹೊಸ ಪ್ರಿಸಿಡೆಂಟ್ ನಿರ್ಮಾಣ ಮಾಡಬೇಡಿ ಎಂದು ಅವರು ಹೇಳಿದ್ದಾರೆ. ಕಳೆದ ಬಾರಿ ಸಹ ಈ ಸದನ ನಡೆಯುತ್ತಿತ್ತು. ಜಿಲ್ಲಾ ಪಂಚಾಯತ್, ತಾಲ್ಲೂಕು ಪಂಚಾಯತ್ ಚುನಾವಣೆ ಡಿಕ್ಲೇರ್ ಆದಕೂಡಲೇ ಅವತ್ತಿವನ ದಿವಸ ಮಾನ್ಯಅಧ್ಯಕ್ಷರು ಸಭೆಯನ್ನು ಅಡ್ಜರ್ನ್ ಮಾಡಿದರು. ಇವತ್ತಿನ ದಿವಸ ಅವರು ಒಂದು ಸಮಸ್ಯೆಯನ್ನು ಹೇಳಿದ್ದಾರೆ. ಅದೇನೆಂದರೆ ಎಂಟು ಬೇಡಿಕೆಗಳ ಮೇಲೆ ಚರ್ಚೆಯಾಗಿದೆ, ಅದಕ್ಕೆ ಉತ್ತರವನ್ನು ಹೇಳುವಂಥಾದ್ದು. ಉಳಿದ ಬೇಡಿಕೆಗಳ ಮೇಲಿನ ಚರ್ಚೆಯನ್ನು ಮುಂದಕ್ಕೆ ಹಾಕುವುದಾದರೆ ಇದನ್ನು ಕೂಡ ಮುಂದೆ ಹಾಕುವುದಕ್ಕೆ ಸಾಧ್ಯವಿದೆ. ಏಕೆಂದರೆ ಇದು ಸಂಪೂರ್ಣ ಚರ್ಚೆಯಾಗಿಲ್ಲ. ಇನ್ನೂ ಅನೇಕ ಸದಸ್ಯರುಗಳು ಇದರ ಬಗ್ಗೆ ಮಾತನಾಡುವವರಿದ್ದಾರೆ. ಆದ್ದರಿಂದ ಉಳಿದ ಬೇಡಿಕೆಗಳ ಮೇಲೆ ಚರ್ಚೆಯನ್ನು ಮುಂದೆ ಹಾಕುವುದಕ್ಕೆ ಅವಕಾಶ ಇದ್ದರೆ ಈ ಎಂಟು ಬೇಡಿಕೆಗಳ ಬಗ್ಗೆ ಚರ್ಚೆಯನ್ನು ಮುಂದೆ ಹಾಕಲಿಕ್ಕೆ ಅವಕಾಶ ಇದೆಯೆಂದು ನಾನೆಂದು ಕೊಂಡಿದ್ದೇನೆ. ಇಲ್ಲದಿದ್ದರೆ ಏನಾಗುತ್ತದೆ ಎಂದರೆ ಈ ಬೇಡಿಕೆಗಳ ಮೇಲೆ ಉತ್ತರ ಹೇಳುವಾಗ ನೀವು ಅನೇಕ ಕಾರ್ಯಕ್ರಮಗಳನ್ನು ಹೇಳಬೇಕಾಗುತ್ತದೆ. ಅದು ಅನಿವಾರ್ಯವಾಗುತ್ತದೆ. ನೀವು ಕಾರ್ಯಕ್ರಮಗಳನ್ನು ಹೇಳುವಾಗ ಇಂತಿಂಥ ಸಮಸ್ಯೆಗಳನ್ನು ಸರ್ಕಾರದ ಮುಂದೆ ಏನು ಇಟ್ಟಿದ್ದಾರೆ, ಅದಕ್ಕೆ ಉತ್ತರವನ್ನು ಹೇಳುವಂಥಾದ್ದು ಸರ್ಕಾರಕ್ಕೆ ಅನಿವಾರ್ಯವಾಗುತ್ತದೆ. ಇದು ಚುನಾವಣೆಯ ನೀತಿಸಂಹಿತೆ ಉಲ್ಲಂಘನೆ ಆಗುತ್ತದೆ. ನಿನ್ನೆ ದಿವಸ ಪ್ರಾಯಶ...

ಅಧ್ಯಕ್ಷರು : ನಿನ್ನೆ ಇದರ ಬಗ್ಗೆ ಮಾತನಾಡಿದ್ದೇವೆ.

ಶ್ರೀ ಕೆ. ಜಯಪ್ರಕಾಶ್ ಹೆಗಡೆ : ನಾನು ನನ್ನ ಅಭಿಪ್ರಾಯ ಹೇಳುತ್ತೇನೆ.

ಅಧ್ಯಕ್ಷರು : ಇಡೀ ದಿವಸ ಪೂರಾ ಅದರ ಬಗ್ಗೆ ಮಾತನಾಡಿದ್ದಾರೆ.

ಶ್ರೀ ಕೆ. ಜಯಪ್ರಕಾಶ್ ಹೆಗಡೆ : ನನ್ನ ಅಭಿಪ್ರಾಯವನ್ನು ಹೇಳುವುದಕ್ಕೆ ನಾನು ನಿಂತಿದ್ದೇನೆ. ಅದನ್ನು ಒಪ್ಪುವುದು ಬಿಡುವುದು ಸರ್ಕಾರಕ್ಕೆ ಬಿಟ್ಟಂಥಾದ್ದು. ಒಂದು ವೇಳೆ ನನ್ನ ಅಭಿಪ್ರಾಯವನ್ನು ಹೇಳುವುದಕ್ಕೆ

ಸದನದಲ್ಲಿ ಹಕ್ಕುಇಲ್ಲದೇ ಹೋದರೆ, ಪ್ರಾಯಶಃ ತಾವು ಕುಳಿತುಕೊಳ್ಳಿ ಎಂದು ಹೇಳಿದರೆ ನಾನು ಕುಳಿತುಕೊಳ್ಳುತ್ತೇನೆ. ಆದರೆ ನನ್ನ ಅಭಿಪ್ರಾಯಗಳನ್ನು ಹೇಳುವುದಕ್ಕೆ ಅವಕಾಶ ಇಲ್ಲದಿದ್ದರೆ ಆದರಿಂದ ನಾನೇನೂ ಸಾಧಿಸಿದ ಹಾಗೆ ಆಗುವುದಿಲ್ಲ.

ಅಧ್ಯಕ್ಷರು : ಬೇಗ ಮುಗಿಸಿ.

ಶ್ರೀ ಕೆ. ಜಯಪ್ರಕಾಶ್ ಹೆಗಡೆ : ಬೇಗ ಮುಗಿಸುತ್ತೇನೆ. ಪಂಚಾಯತ್‌ರಾಜ್ ಬಿಲ್‌ಬಗ್ಗೆ ಚರ್ಚೆ ಮಾಡುತ್ತ ಒಂದು ಮಾತನ್ನು ನಾನು ಹೇಳಿದ್ದೇನೆ. ಈಗ ಬದಲಾವಣೆಯಾಗುತ್ತಿರುವುದರ ಬಗ್ಗೆ ಪ್ರಶ್ನೆ ಇದೆ. ನಿನ್ನೆ ದಿವಸ ಗೋಪಾಲ ಪೂಜಾರಿಯವರ ಕ್ಷೇತ್ರದಲ್ಲಿ ಒಂದು ಬದಲಾವಣೆ ಮಾಡಿ ಕೋಟೇಶ್ವರದಿಂದ ಬದಲಾವಣೆ ಮಾಡಿ ಬೈಂದೂರಿಗೆ ಹಾಕಿ, ಬೈಂದೂರಿನಿಂದ ಬದಲಾವಣೆ ಮಾಡಿದ್ದಾರೆ. ಮೊನ್ನೆ ದಿವಸ ನಾನು ಹೇಳಿದ್ದಕ್ಕೆ ಉತ್ತರವನ್ನು ಮಾನ್ಯ ಫೋರ್ಪಡೆಯವರು ಕೊಡುತ್ತೇನೆಂದು ಹೇಳಿದ್ದರು. ತಪ್ಪುಗಳು ಆಗಿಲ್ಲವೆಂದು ಹೇಳಿದ್ದಾರೆ. ಕಾರ್ಕಳದಿಂದ ಒಂದು ಮಾಸಲಾತಿಯನ್ನು ಪರಿಶಿಷ್ಟ ಜಾತಿಗೆ ಇದ್ದುದನ್ನು ತೆಗೆದು ನನ್ನ ಕ್ಷೇತ್ರಕ್ಕೆ ಹಾಕಿದ್ದಾರೆ. ನಾನು ಅದನ್ನು ಪುನಃ ವಾಪಾಸ್ಸು ಕೇಳುತ್ತಿಲ್ಲ. ಅದರ ಬಗ್ಗೆ ಸರ್ಕಾರದ ಗಮನಕ್ಕೆ ತರುತ್ತಿದ್ದೇನೆ. ಪರಿಶಿಷ್ಟ ಜಾತಿಯನ್ನು ನನ್ನ ಕ್ಷೇತ್ರಕ್ಕೆ ಹಾಕಿದ್ದನ್ನು ಬದಲಾವಣೆ ಮಾಡಬೇಕೆಂದು ನಾನು ಕೇಳುತ್ತಿಲ್ಲ. ಯಾವುದನ್ನು ಬದಲಾವಣೆ ಮಾಡಿದ್ದೀರಿ, ಅದರಲ್ಲೇ ಚುನಾವಣೆಗೆ ಹೋಗುವುದಕ್ಕೆ ನಾವು ತಯಾರಾಗಿದ್ದೇವೆ. ನಾನೇನೂ ಯಾವ ಪಕ್ಷದ ಜತೆಗೆ ಹೊಂದಾಣಿಕೆ ಮಾಡಿಕೊಳ್ಳುವುದಕ್ಕೆ ತಯಾರಿಲ್ಲ. ಪಕ್ಷೇತರರಾಗಿ ನಮ್ಮ ಅಭ್ಯರ್ಥಿಗಳು ಚುನಾವಣೆಗೆ ಹೋಗುತ್ತಾರೆ. ಆದ್ದರಿಂದ ನಾನು ಆಗಿರುವ ವ್ಯತ್ಯಾಸಗಳನ್ನು ಹೇಳಿದ್ದೇನೆ. ಆದರೆ ಈ ತಪ್ಪುಗಳು ಹತ್ತನೇ ತಾರೀಖಿನವರೆಗೆ ಹೀಗೆ ಆಗುತ್ತ ಹೋದರೆ ಹೇಗೆ? ನಾನು ಒಂದು ಮಾತನ್ನು ಮೊನ್ನೆ ಹೇಳಿದ್ದೆ.

ಅಧ್ಯಕ್ಷರು : ಮಾಸಲಾತಿ ಬಗ್ಗೆ ನಾವು ಚರ್ಚೆ ಮಾಡಿದ್ದೇವೆ ಮತ್ತು ಅವರು ಉತ್ತರ ಕೊಟ್ಟಿದ್ದಾರೆ. ಅವರು ಉತ್ತರ ಕೊಟ್ಟಿಲ್ಲವೇನು?

ಶ್ರೀ ಕೆ. ಜಯಪ್ರಕಾಶ್ ಹೆಗಡೆ : ಇಲ್ಲ, ಉತ್ತರ ಕೊಟ್ಟಿಲ್ಲ. ಅವತ್ತು ನಾನು ಹೇಳಿದ್ದಕೆ ನನಗೆ ಉತ್ತರ ಸಿಕ್ಕಿಲ್ಲ.

ಶ್ರೀ ಕರಿಯಣ್ಣ : ಅಧ್ಯಕ್ಷರೇ, ಅವತ್ತು ಉತ್ತರ ಕೊಟ್ಟಿದ್ದಾರೆ.

ಶ್ರೀ ಕೆ. ಜಯಪ್ರಕಾಶ್ ಹೆಗಡೆ : ಉತ್ತರ ಕೊಟ್ಟಿಲ್ಲ. ಬೇಕಾದರೆ ಕಡತ ತೆಗೆಸಿ ನೋಡಿ.

ಅಧ್ಯಕ್ಷರು : ಮಾಸಲಾತಿ ಬಗ್ಗೆ ಅವರು ಉತ್ತರ ಕೊಟ್ಟಿದ್ದಾರೆ.

ಶ್ರೀ ಕೆ. ಜಯಪ್ರಕಾಶ್ ಹೆಗಡೆ : ಮಾನ್ಯ ಅಧ್ಯಕ್ಷರೇ, ಅವರು ಉತ್ತರ ಕೊಟ್ಟಿದ್ದರೆ ನಾನು ಮುಂದೆ ಒಂದು ಶಬ್ಧವನ್ನೂ ಮಾತನಾಡುವುದಿಲ್ಲ. ತಾವು ಕಡತ ತೆಗೆದು ನೋಡಿ. ಒಂದು ವೇಳೆ ನಾನು ಕೇಳಿದ ಪ್ರಶ್ನೆಗೆ ಮಾನ್ಯ ಸಚಿವರು ಉತ್ತರ ಕೊಟ್ಟಿದ್ದಾರೆ ನಾನು ಅದರ ಬಗ್ಗೆ ಚರ್ಚೆ ಮಾಡುವುದಿಲ್ಲ.

ಅಧ್ಯಕ್ಷರು : ಈಗ ನೀವೇನು ರೈಸ್ ಮಾಡಿದ್ದೀರಿ, ಅದಕ್ಕೆ ಈಗ ಉತ್ತರ ಕೊಡುತ್ತಾರೆ.

ಶ್ರೀ ಕೆ. ಜಯಪ್ರಕಾಶ್ ಹೆಗಡೆ : ಅದನ್ನೇ ನಾನು ಹೇಳುತ್ತಿರುವುದು. ಉತ್ತರ ಕೊಡುವುದಕ್ಕೆ ಅವಕಾಶ ಇಲ್ಲ. ಅದನ್ನು ಮಾಡಿಕೊಡಬಾರದು ಎಂದು ನಾನು ಸರ್ಕಾರಕ್ಕೆ ತಮ್ಮ ಮೂಲಕ ಕೇಳುತ್ತಿರುವಂಥಾದ್ದು. ತಾವು ರೆಕಾರ್ಡ್ಸ್ ತೆಗೆದು ನೋಡಿ. ನನ್ನ ಪ್ರಶ್ನೆಗೆ ಉತ್ತರ ಕೊಟ್ಟಿದ್ದರೆ ನಾನು ಒಂದು ಶಬ್ಧ ಜಾಸ್ತಿ ಮಾತನಾಡುವುದಿಲ್ಲ.

ಅಧ್ಯಕ್ಷರು : ಸ್ವಲ್ಪ ಹೆಚ್ಚು ಕಡಿಮೆ ಸರ್ವೇ ಸಾಮಾನ್ಯವಾಗಿ ಎಲ್ಲ ಪ್ರಶ್ನೆಗಳಿಗೆ ಉತ್ತರ ಕೊಟ್ಟಿದ್ದಾರೆ. ಈಗ ಏನು ಹೇಳಿದ್ದೀರಿ, ಆ ಪ್ರಶ್ನೆಗೆ ಉತ್ತರ ಹೇಳುತ್ತಾರೆ ಬಿಡಿ. ಈಗ ಹೇಳಿಸೋಣ ಬಿಡಿ.

ಶ್ರೀ ಕೆ. ಜಯಪ್ರಕಾಶ್ ಹೆಗಡೆ : ಈ ಸದನದಲ್ಲಿ ನಾನು ತಪ್ಪು ಮಾಹಿತಿಯನ್ನು ಕೊಟ್ಟರೆ ತಾವು ಕ್ರಮ ತೆಗೆದುಕೊಳ್ಳಿ. ನಾನು ಇಷ್ಟರವರೆಗೆ ಒಂದು ವೇಳೆ ಸದನಕ್ಕೆ ತಪ್ಪು ಮಾಹಿತಿಯನ್ನು ಕೊಟ್ಟಿದ್ದೇನೆಂದು ಅದರೆ ತಾವು ನನ್ನ ಮೇಲೆ ಕ್ರಮ ತೆಗೆದುಕೊಳ್ಳಬಹುದು.

ಅಧ್ಯಕ್ಷರು : ಬೇಕಾಗಿಲ್ಲ. ಈಗ ಎಂಟು ಡಿಮಾಂಡ್ಸ್ ಬಗ್ಗೆ ರಿಪ್ಲೈ ಮಾಡಬೇಕು. ರಿಸರ್ವೇಶನ್ ಬಗ್ಗೆ ದಯವಿಟ್ಟು ಮಾತನಾಡಬೇಡಿ.

(ಗೊಂದಲ)

ಅಧ್ಯಕ್ಷರು : ರಿಸರ್ವೇಶನ್ ಬಗ್ಗೆ ಚರ್ಚೆ ಮುಗಿದಿದೆ. ಅಲ್ಲಿಗೂ ನಿಮ್ಮ ಪ್ರಶ್ನೆಗೆ ಉತ್ತರ ಬೇಕು ಎಂದರೆ ಅವರ ಕೈಯಲ್ಲಿ ಉತ್ತರ ಹೇಳಿಸೋಣ.

ಶ್ರೀ ಕೆ. ಜಯಪ್ರಕಾಶ್ ಹೆಗಡೆ : ಈ ಸದನದಲ್ಲಿ ನಿರ್ದಿಷ್ಟವಾಗಿ ಎರಡು ನಿಮಿಷ ಸದಸ್ಯರಿಗೆ ಮಾತನಾಡುವುದಕ್ಕೆ ಅವಕಾಶ ಇರುವುದು. ಜಾಸ್ತಿ ಮಾತನಾಡಬಾರದು ಎಂದಿದ್ದರೆ ಅವತ್ತು ನನ್ನ ಸಹೋದ್ಯೋಗಿ ಶ್ರೀ ಕೆ.ಬಿ. ಮಲ್ಲಿಕಾರ್ಜುನ್ ಅವರು ಒಂದು ಪಾಯಿಂಟ್ ಆಫ್ ಆರ್ಡರ್‌ನ್ನು ಎತ್ತಿದ್ದರು. ಒಂದೇ ವಿಷಯದ ಬಗ್ಗೆ ರೂಲ್ 72ರಲ್ಲಿ ಎರಡೂವರೆ ಗಂಟೆ ಕಾಲ ಚರ್ಚೆ ಮಾಡುವುದಕ್ಕೆ ಅವಕಾಶ ಇದ್ದರೆ, ಅದು ತಪ್ಪು, ಇದರಿಂದ ನಾವು ಪ್ರಿಸೆಡೆಂಟನ್ನು ಕ್ರಿಯೇಟ್ ಮಾಡುತ್ತಿದ್ದೇವೆ ಎಂದು ಅವರು ಕೇಳಿದರು. ಅವತ್ತು ಎರಡೂವರೆ ಗಂಟೆ ಕಾಲ ಚರ್ಚೆ ಮಾಡುವುದಕ್ಕೆ ಅವಕಾಶ ಇದ್ದರೆ, ಇವತ್ತು ನಾನು ಇನ್ನು ಮಾತನಾಡುವುದಿಲ್ಲ, ನನಗೆ ಎರಡು ನಿಮಿಷ ಕಾಲ ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದೀರಿ. ಅದಕ್ಕಾಗಿ ತಮಗೆ ನಾನು ಧನ್ಯವಾದಗಳನ್ನು ಅರ್ಪಿಸುತ್ತ ಇನ್ನು ಈ ಸದನದಲ್ಲಿ ಯಾವತ್ತಾದರೂ ಯಾವುದೇ ವಿಷಯದ ಚರ್ಚೆಗೆ ತಾವು ಇಂತಿಷ್ಟು ಕಾಲ ಎಂದು ನಿಗದಿಪಡಿಸಿದರೆ ಅಷ್ಟು ಹೊತ್ತು ಮಾತನಾಡಲಿ. ನಾನಷ್ಟೇ ಅಲ್ಲ, ಪ್ರತಿಯೊಬ್ಬರಿಗೂ ಎಷ್ಟು ಸಮಯವನ್ನು ನಿಗದಿ ಪಡಿಸುತ್ತೀರಿ, ಅದಕ್ಕಿಂತಲೂ ಹೆಚ್ಚು ಅವಕಾಶ ಕೊಡಬಾರದು. ಇಷ್ಟು ನಾನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಏಕೆಂದರೆ ಒಬ್ಬರಿಗೆ ಜಾಸ್ತಿ ಸಮಯ, ಒಬ್ಬರಿಗೆ ಕಡಿಮೆ ಸಮಯ ಕೊಟ್ಟರೆ ಅದೂ ಕೂಡ ಸರಿಯಾಗಿ ಕಾಣಿಸುವುದಿಲ್ಲ. ಇದನ್ನು ಹೇಳುವಾಗ ನಾನು ಸಹಿತ ನನ್ನ ಅಭಿಪ್ರಾಯವನ್ನು ಹೇಳಿ ಇದರ ಬಗ್ಗೆ ಚರ್ಚೆಯನ್ನು ಮುಂದುವರೆಸಿ ಬೇಡಿಕೆಯನ್ನು ಮತಕ್ಕೆ ಹಾಕುವುದರ ಬಗ್ಗೆ ವಿರೋಧ ಪಡಿಸುತ್ತಾ ನಾನು ಸಹ ಸಭಾತ್ಯಾಗ ಮಾಡುತ್ತಿದ್ದೇನೆ.

(ಮಾನ್ಯ ಸದಸ್ಯರಾದ ಶ್ರೀ ಕೆ. ಜಯಪ್ರಕಾಶ್ ಹೆಗಡೆಯವರು ಸಭಾತ್ಯಾಗ ಮಾಡಿದರು)

ಶ್ರೀ ಎನ್. ಚಲುವರಾಯಸ್ವಾಮಿ (ನಾಗಮಂಗಲ) : ಮಾನ್ಯ ಅಧ್ಯಕ್ಷರೇ, ಇವತ್ತು ಸದನ ನಡೆಯುತ್ತಾ ಇರತಕ್ಕಂಥ ಸಂದರ್ಭದಲ್ಲಿ ಜಿಲ್ಲಾ ಪಂಚಾಯತ್, ತಾಲ್ಲೂಕು ಪಂಚಾಯತ್ ಬಗ್ಗೆ ಇವತ್ತು ನಮ್ಮ ರಾಜಕೀಯ ವ್ಯವಸ್ಥೆಯಲ್ಲಿ ಬಹಳ ಪ್ರಾಮುಖ್ಯವಾದಂಥ ಪಾತ್ರ ವಹಿಸತಕ್ಕಂಥಾದ್ದು ಚುನಾವಣೆಯಾಗಿರುತ್ತದೆ. ಚುನಾವಣಾಧಿಕಾರಿ ಚುನಾವಣೆಯನ್ನು ನಿಗದಿಪಡಿಸಿ ಅವತ್ತಿನಿಂದಲೇ ಅಂದರೆ ಮೊನ್ನೆಯಿಂದಲೇ ಚುನಾವಣಾ ಸಂಹಿತೆ ಜಾರಿಗೆ ಬರುತ್ತದೆ ಎಂದು ಅವರು ಹೇಳಿರುವುದರಿಂದ,

ಈ ಸದನವನ್ನು ನಡೆಸತಕ್ಕದ್ದು ಸೂಕ್ತವಲ್ಲವೆಂದು ಈಗಾಗಲೇ ಎಲ್ಲರೂ ಸದನಕ್ಕೆ ಅಧ್ಯಕ್ಷರ ಗಮನಕ್ಕೆ ತಂದಿದ್ದಾರೆ. ಇವತ್ತು ಕೆಲವರು ಹೇಳಿದ ಹಾಗೆ ಮಾಸಲಾತಿ ಬಗ್ಗೆ ಎನೇ ಆಗರಲಿ, ಅದರ ಬಗ್ಗೆ ಸಾಕಷ್ಟು ಚರ್ಚೆಯಾಗಿದೆ. ಮಾಸಲಾತಿ ಬಗ್ಗೆ ಉತ್ತರವನ್ನು ಕೂಡ ಕೊಟ್ಟಿದ್ದಾರೆ. ಈ ಚುನಾವಣೆ ಬಹಳ ಪ್ರಾಮುಖ್ಯತೆ ಹೊಂದಿರುವುದರಿಂದ ಮತ್ತು ಚುನಾವಣೆ ಸಂಹಿತೆ ಜಾರಿಯಲ್ಲಿರುವುದರಿಂದ ಈ ಸಂದರ್ಭದಲ್ಲಿ ಸದನ ನಡೆಸತಕ್ಕದ್ದು ಸೂಕ್ತವಲ್ಲ. ಅದಕ್ಕಾಗಿ ದಯವಿಟ್ಟು ತಾವು ಹಾಗೇನಾದರೂ ಎಂಟು ಬೇಡಿಕೆಗಳ ಬಗ್ಗೆ ಮಾತ್ರ ಉತ್ತರ ಕೊಟ್ಟು ಮುಂದಿನ ಬೇಡಿಕೆಗಳ ಬಗ್ಗೆ ಚರ್ಚೆಯನ್ನು ಮುಂದೂಡುತ್ತೇವೆ ಎಂದು ಹೇಳುವಾಗ, ಉತ್ತರವನ್ನು ಸಹ ಮುಂದೂಡಿ. ಇವತ್ತು ಉತ್ತರ ಕೊಡುವ ಬಗ್ಗೆ ಮಾನ್ಯ ಅಧ್ಯಕ್ಷರು ತೀರ್ಮಾನ ತೆಗೆದುಕೊಳ್ಳಬೇಕು. ಜೊತೆಗೆ ನಾನು ಮಾಸಲಾತಿ ಬಗ್ಗೆ ಪ್ರಶ್ನೆ ಮಾಡುತ್ತಿಲ್ಲ. ಅವತ್ತು ಆರ್ ಡಿಪಿಆರ್ ಮಂತ್ರಿಗಳು ಉತ್ತರವನ್ನು ಕೊಟ್ಟಿದ್ದರು. ಒಂದು ಸಾರಿ ನಾವು ಮಾಡಿರತಕ್ಕಂಥ ಅಧಿಸೂಚನೆಯನ್ನು ನುತ್ತೆ ಹೊರಡಿಸುವುದಿಲ್ಲ, ಮೊದಲು ಏನು ಮಾಡಿದ್ದೇವೆ ಅದನ್ನು ಬದಲಾವಣೆ ಮಾಡುವುದಿಲ್ಲ ಎಂದು ಹೇಳಿದ್ದರು. ಇವತ್ತು ಎಸ್ ಸಿ :ಎಸ್ ಟಿ ರಿಸರ್ವೇಶನ್ ನಿಂದ ಏನಾದರೂ ತಪ್ಪಾಗಿದ್ದರೆ ಬದಲಾವಣೆ ಮಾಡಿದ್ದೇವೆ ಎಂದು ಹೇಳಿದ್ದಾರೆ. ನಮ್ಮ ಮಂಡ್ಯದಲ್ಲಿ ಜಿಲ್ಲಾ ಪಂಚಾಯತ್ ಮತ್ತು ತಾಲ್ಲೂಕು ಪಂಚಾಯತ್ ಗೆ ರಿಸರ್ವೇಶನ್ ಅನ್ನು ಮೊದಲು ಮಾಡಿರುವುದಕ್ಕಿಂತ ಹೆಚ್ಚು ಮಾಡಿ ಅಧಿಸೂಚನೆಯನ್ನು ಹೊರಡಿಸಿದ್ದಾರೆ. ಜಿಲ್ಲಾ ಪಂಚಾಯತ್ ಬಗ್ಗೆ ಎರಡು ಆರ್ಡರ್ ಗಳು ಬಂದಿವೆ. ತಾಲ್ಲೂಕು ಪಂಚಾಯತಿಗಳ ಬಗ್ಗೆ ಸಹಿತ ಅಧಿಸೂಚನೆ ಮತ್ತೆ ಬದಲಾವಣೆಯಾಗಿದೆ. ಇದು ಸೂಕ್ತವಲ್ಲ. ಅವರು ಮಾಡಿರತಕ್ಕಂಥ ರಿಸರ್ವೇಶನ್ ಅನ್ನು ಅವರು ಮಾಡಿರತಕ್ಕಂಥ ಅಧಿಕಾರಿಗಳ ನೇತೃತ್ವದಲ್ಲಿ ಏನು ಗೈಡ್ ಲೈನ್ಸ್ ಇದೆ, ಅದರ ಪ್ರಕಾರ ಮಾಡಿರುವಂಥಾದ್ದನ್ನು ಅವರೇ ಬದಲಾವಣೆ ಮಾಡಿದರೆ ಅದು ಸೂಕ್ತವಲ್ಲ. ಜೊತೆಗೆ ಬಹಳ ಪ್ರಮುಖವಾದಂಥ...

ಅಧ್ಯಕ್ಷರು : ಈಗಾಗಲೇ ಅವರು ಅದಕ್ಕೆ ಉತ್ತರ ಕೊಟ್ಟಿದ್ದಾರೆ.

ಶ್ರೀ ಎನ್. ಚೆಲುವರಾಯಸ್ವಾಮಿ : ಇವತ್ತು ಸದನ ನಡೆಸತಕ್ಕದ್ದು ಸೂಕ್ತ ಅಲ್ಲ. ಸದನವನ್ನು ಮುಂದೂಡಬೇಕೆಂದು ಒತ್ತಾಯ ಮಾಡಿ ನಾನು ಕೂಡ ಇದರ ಬಗ್ಗೆ ಬಹಿಷ್ಕಾರ ಮಾಡುತ್ತೇನೆ.

(ಮಾನ್ಯ ಸದಸ್ಯರಾದ ಶ್ರೀ ಎನ್. ಚೆಲುವರಾಯಸ್ವಾಮಿಯವರು ಸಭಾತ್ಯಾಗ ಮಾಡಿದರು)

ಅಧ್ಯಕ್ಷರು : ಚಂದ್ರೇಗೌಡರೇ, ತಾವೇನಾದರೂ ಹೇಳುತ್ತೀರಾ?

ಶ್ರೀ ಡಿ.ಬಿ. ಚಂದ್ರೇಗೌಡ : ಒತ್ತಾಯ ಮಾಡಿದ ತಕ್ಷಣ ಬಹಿಷ್ಕಾರ ಮಾಡಿಬಿಟ್ಟರು. ತೀರ್ಮಾನ ಏನಾಯಿತುಎಂದು ತಿಳಿಯಬೇಕಲ್ಲ? ಅದಕ್ಕೇ ನಾನು ಹೇಳಿದ್ದು 'ಒಲ್ಲದ ಗಂಡನಿಗೆ ಮೊಸರಿನಲ್ಲಿ ಕಲ್ಲುಸಿಕ್ಕಿತು '' ಎಂದು. ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಗಳು ಈಗ ಉತ್ತರ ಹೇಳುವುದಕ್ಕೆ ತಯಾರಾಗಿದ್ದಾರೆ.

ಶ್ರೀ ಬಿ.ಬಿ. ಶಿವಪ್ಪ : ಅಧ್ಯಕ್ಷರೇ, ನಾನು ಮಾತನಾಡುತ್ತೇನೆ.

ಅಧ್ಯಕ್ಷರು : ಮಾತನಾಡಿ.

11.20 ಎ.ಎಂ.

+ಶ್ರೀ ಬಿ.ಬಿ. ಶಿವಪ್ಪ (ಸಕಲೇಶಪುರ) : ಸನ್ಮಾನ್ಯ ಅಧ್ಯಕ್ಷರೇ, ನಿನ್ನೆಯಿಂದ ಈ ಸದನದ ಕಾರ್ಯ ಕಲಾಪಗಳನ್ನು ನಿಶ್ಯಬ್ದವಾಗಿ ವೀಕ್ಷಿಸುತ್ತಾ ಇದ್ದೇನೆ. ಈ ಸದನದಲ್ಲಿ ಭಾರಿ ಹಿರಿಯ ಸದಸ್ಯರುಗಳು ಇದ್ದಾರೆ. 4-5 ಸಾರಿ ಈ ಸದನಕ್ಕೆ ಆರಿಸಿ ಬಂದಂಥ ಮಾನ್ಯ ಮುಖ್ಯಮಂತ್ರಿಗಳು ಇದ್ದಾರೆ, ಮಾನ್ಯ ಚಂದ್ರೇಗೌಡರು ಮಾನ್ಯ ಫೋರ್ಪ ಡೆಯವರು, ಮಾನ್ಯ ರಂಗನಾಥ್ ರವರು ಇದ್ದಾರೆ. ಹೀಗೆ ಇನ್ನೂ ಅನೇಕ ಜನ ಇದ್ದಾರೆ. ಈ ಸದನ ಯಾವ ದಿಕ್ಕಿನಲ್ಲಿ ಹೋಗುತ್ತಾ ಇದೆ ಎಂಬುದನ್ನು ಅವರು ಅರ್ಥ ಮಾಡಬೇಕು. ಏಕೆಂದರೆ, ನಾನು ಕೇವಲ ಎರಡನೇ ಬಾರಿ ಈ ಸದನದೊಳಗೆ ಪ್ರವೇಶ ಮಾಡಿದ್ದೇನೆ. ಈ ಸದನದಲ್ಲಿ ಮೇಧಾವಿಗಳಿದ್ದಂಥ ಕಾಲದ ಲ್ಲೂ ಕೂಡ, ಮೇಲೆ ಕುಳಿತು ನಾನು ಈ ಸದನವನ್ನು ವೀಕ್ಷಿಸಿದ್ದೇನೆ. ಮಾನ್ಯ ಕೆಂಗಲ್ ಹನುಮಂತಯ್ಯ ನವರ ಕಾಲದಿಂದ, ನನಗೆ ಸಮಯ ಸಿಕ್ಕಿದಂಥ ಸಂದ ರ್ಭದಲ್ಲಿ, ನಾನು ಶಾಸಕನಲ್ಲದಿದ್ದರೂ ಕೂಡ ಈ ಸದನದೊಳಗೆ ಪ್ರವೇಶ ಮಾಡಿ, ಇಲ್ಲಿ ನಡೆಯತಕ್ಕಂಥ ಕಾರ್ಯಕಲಾಪಗಳನ್ನು ನೋಡಿದ್ದೇನೆ. ಎರಡು ದಿವಸಗಳ ಕಾಲ ಸದನದಲ್ಲಿ ಏನೂ ನಡೆದಿಲ್ಲ. ಇದು ಇವತ್ತಿನದಲ್ಲ, ಹಿಂದೆ ಇದ್ದಂಥ ಸರ್ಕಾರ ದಲ್ಲೂ ಕೂಡ ಇತ್ತು. ಈಗ ತಾನೇ ಮಾನ್ಯ ರಾಮಯ್ಯನವರು ಹೇಳಿದ ಹಾಗೆ, ಬೇಡದ ವಿಚಾರಗಳ ಬಗ್ಗೆ ಚರ್ಚೆ ತೆಗದು, ಕಾರ್ಯಕಲಾಪಗಳನ್ನೆಲ್ಲಾ ಮುಂದೆ ತಳ್ಳಿ, ಕೊನೇ ದಿವಸ ಇವತ್ತು ತಾವು ಇಟ್ಟಿದ್ದೀರಿ. ಚರ್ಚೆ ನಡೆಯಬೇಕೆಂದು ಹೇಳುತ್ತಾ ಇದ್ದೀರಿ. ಇವತ್ತಿನ ಕಾರ್ಯಕ್ರಮದ ಪಟ್ಟಿಯಲ್ಲಿ 49 ಬೇಡಿಕೆಗಳನ್ನು ಇಟ್ಟಿದ್ದೀರಿ. ಇದು ಸರಿಯೇ? ಬೇಡಿಕೆಗಳ ಮೇಲೆ ನಾವು ಚರ್ಚೆ ಮಾಡುವುದಾದರೆ, 49 ಬೇಡಿಕೆಗಳನ್ನು ಒಂದೇ ದಿನ ಇಟ್ಟು, ಕಾರ್ಯಕಲಾಪಗಳನ್ನು ನಡೆಸಿ ಎಂದು ಹೇಳುವಂತಾದ್ದು ಸರಿಯೇ? ಹೀಗಾದರೆ ಗೊಂದಲ ಆಗುತ್ತದೆ, ಎಲ್ಲರೂ ಸಭಾತ್ಯಾಗ ಮಾಡುವುದೋ ಅಥವಾ ಬಾಯ್ ಕಾಟ್ ಮಾಡು ವುದೋ, ಮಾಡುತ್ತಾರೆ. ಅದಾದನಂತರ, ತಾವು ಪಾಸ್ ಮಾಡಿಕೊಂಡು ಹೋಗುವುದರಿಂದ, ಉದ್ದೇಶ ಏನು? ಜನ ನಮ್ಮನ್ನು ಇಲ್ಲಿಗೆ ಆರಿಸಿ ಕಳುಹಿಸಿರತ ಕ್ಕಂತಾದ್ದು ಕ್ಷೇತ್ರದ, ರಾಜ್ಯದ ಸಮಸ್ಯೆಗಳ ಬಗ್ಗೆ ಚರ್ಚೆ ಮಾಡಿ, ರಾಜ್ಯ ಭವಿಷ್ಯವನ್ನು ಉಜ್ವಲ ಮಾಡಲಿ ಎಂದು ಕಳುಹಿಸಿದ್ದಾರೆ. ಅಂದರೆ, ಎಲ್ಲವನ್ನೂ ನಾವೇ ತಿಳಿದುಕೊಂಡಿರುವವರು, ಎಲ್ಲಾ ವಿಚಾರಗಳಲ್ಲೂ, ನಾವೇ ಬುದ್ಧಿವಂತರು ಎಂದಲ್ಲ, ಹೊರ ಗಡೆ ನಮಗಿಂತ ಮಹಾ ಬುದ್ಧಿವಂತರು ಇದ್ದಾರೆ. ಮತ ದಾರ, ಸಾಮಾನ್ಯ ಮತದಾರ ಅಲ್ಲ. ನಮಗಿಂತ ಅತಿ ಮೇಧಾವಿಗಳು ಹೊರಗೆ ಇದ್ದಾರೆ. ಆದರೆ, ಅವರಿಗೆ ಅವಕಾಶ ಸಿಕ್ಕಿಲಿಲ್ಲ ಹೊರಗೆ ಇದ್ದಾರೆ, ನಮಗೆ ಅವಕಾಶ ಸಿಕ್ಕಿದೆ, ನಾವು ಒಳಗೆ ಇದ್ದೇವೆ. ಅಂದಮೇಲೆ ಸದನವನ್ನು ಯಾವ ರೀತಿ ನಡೆಸಬೇಕು? ನಿನ್ನೆ ಮತ್ತು ಮೊನ್ನೆ ಎರಡು ದಿವಸಗಳಿಂದ ಕೇವಲ ಸ್ವಪ್ರತಿಷ್ಠೆಯಿಂದಾಗಿ, ಯಾವುದೆ ಒಂದು ಕಾರಣ ಕ್ಕೋಸ್ಕರ ಅವರೂ ಬಗ್ಗುವುದಿಲ್ಲ, ಇವರೂ ಬಗ್ಗುವುದಿಲ್ಲ. ಇವರು ಸದನವನ್ನು ಮುಂದೂಡಿ ಎಂದು ಹೇಳುತ್ತಾರೆ, ಅವರು ಸದನವನ್ನು ನಡೆಸುತ್ತೇವೆಂದು ಹೇಳುತ್ತಿದ್ದಾರೆ. ಈ ಹಠ ಏತಕ್ಕೆ ಬೇಕಿತ್ತು? ಯಾರಾದರೂ ಒಬ್ಬರು ಬಗ್ಗಬಹುದಿತ್ತು. ಆಡಳಿತ ಪಕ್ಷದಿಂದ ಕಾರಣ ಕೊಡುತ್ತಿದ್ದಾರೆ, ಕಾರ್ಯಕಲಾಪಗಳ ಸಲಹಾ ಸಮಿತಿಯಲ್ಲಿ 5ನೇ ತಾರೀಖಿನವರೆಗೆ ಸದನವನ್ನು ನಡೆಸಬೇಕೆಂದು ತೀರ್ಮಾನ ಮಾಡಿದ್ದೇವೆ, ಅದರಿಂದ ನಾವು ನಡೆಸೇ ನಡೆಸುತ್ತೇವೆಂದು ಹೇಳುತ್ತಾರೆ. ಸಂತೋಷ, ಬಿಸಿನೆಸ್ ಅಡ್ವೈಸರಿ ಕಮಿಟಿಯಲ್ಲಿ ಏತಕ್ಕೋಸ್ಕರ, ಏನು ತೀರ್ಮಾನವಾಯಿತು ಎಂಬೂದನ್ನೂ ವಿರೋಧ ಪಕ್ಷದವರು ಹೇಳಿದ್ದಾರೆ. ಆದರೆ, ಕಾರ್ಯಕಲಾಪಗಳ ಸಲಹಾ ಸಮಿತಿಯಲ್ಲಿ ಅದಂಥ ತೀರ್ಮಾನಗಳನ್ನು ಅದೆಷ್ಟು ಬಾರಿ ತಾವು ಬದಲಾವಣೆ ಮಾಡಲಿಲ್ಲ? ಅನೇಕ ಸಾರಿ ತಮಗೆ ಅನೂಕಲ ಬಂದಂಥ ಕಾಲದಲ್ಲಿ ಬದಲಾವಣೆ ಮಾಡಿದ್ದೀರಿ. ಹಾಗೆ, ಈಗಲೂ ಬದಲಾವಣೆ ಮಾಡಿ ಸದನವನ್ನು ಮುಂದೆ ಹಾಕತಕ್ಕ ಕೆಲಸವನ್ನು ಮಾಡಬಹುದಿತ್ತು. ಆದರೆ, ಅದು ಆಗಲಿಲ್ಲ. ವಿರೋಧಪಕ್ಷದವರು ಸಾಕಷ್ಟು ಹೋರಾಟ

ಮಾಡಿ, ಇಡೀ ಒಂದು ದಿವಸ ಈ ಸದನದ ಸಮಯವನ್ನು ಕಳೆದರೂ ಕೂಡ, ಸರ್ಕಾರ ಬಗ್ಗಲಿಲ್ಲವೆನ್ನುವುದಾದರೆ ಅವರು ಕೊಡುತ್ತಿರತಕ್ಕ ಉತ್ತರಕ್ಕೆ ಸರಿಯಾದಂಥ ಪ್ರತ್ಯುತ್ತರವನ್ನು ಕೊಟ್ಟು ಎದುರಿಸತಕ್ಕ ಶಕ್ತಿ ಅವರಿಗೆ ಇತ್ತು. ಆದರೆ, ಅವರು ಅದನ್ನೂ ಮಾಡಲಿಲ್ಲ. ಹಾಗಾದರೆ, ಜನತೆಯ ಎದುರಿನಲ್ಲಿ ನಾವು ಹೋಗಿ ಹೇಳಬೇಕಾದ ವಿಚಾರ ಏನು? ಮೂರು ದಿವಸ ಸದನದ ಸಮಯವನ್ನು ನಿಮ್ಮ ಖರ್ಚಿನಲ್ಲಿ ಕಳೆದು ಬಂದಿದ್ದೇವೆಂದು ಹೇಳುವುದಕ್ಕಾಗುತ್ತದೆಯೇ? ಇವತ್ತು ಮಾನ್ಯ ಮುಖ್ಯಮಂತ್ರಿಗಳು ನಮ್ಮದು ಪಾರದರ್ಶಕ ಸರ್ಕಾರ ಎಂದು ಹೇಳಿದ್ದಾರೆ. ನಾನು ಅದನ್ನು ಒಪ್ಪಿಕೊಳ್ಳುತ್ತೇನೆ. ನಾವು ಆ ದಿಕ್ಕಿನಲ್ಲಿ ಹೋಗಬೇಕಾಗುತ್ತದೆ. ಆದರೆ, ನಾನು ಈ ರಿಸರ್ವೇಷನ್ ಬಗ್ಗೆ ಹೆಚ್ಚು ತಲೆಕೆಡಿಸಿಕೊಂಡಿಲ್ಲ. ಅದರಲ್ಲಿ ಎಷ್ಟು ಸಾರಿ ಬದಲಾವಣೆ ಮಾಡಲಾಯಿತು? ಚುನಾವಣೆ ಆಯೋಗದಿಂದ, ಸರ್ಕಾರ ತಮ್ಮ ಕೈಗೆ ತೆಗೆದುಕೊಂಡ ಜಿಲ್ಲಾಧಿಕಾರಿಗಳಿಗೆ ಕೊಟ್ಟ ನಂತರ....

ಅಧ್ಯಕ್ಷರು : ಮಾನ್ಯ ಶಿವಪ್ಪನವರೇ, ರಿಸರ್ವೇಷನ್ ಬಗ್ಗೆ ಈಗಾಗಲೇ ಚರ್ಚೆಯಾಗಿ ಮಾನ್ಯ ಮಂತ್ರಿಗಳು ಉತ್ತರವನ್ನು ಕೊಟ್ಟಿದ್ದಾರೆ.

ಶ್ರೀ ಬಿ.ಬಿ. ಶಿವಪ್ಪ : ಸಾರ್, ನಾನು ಯಾವತ್ತೂ ಮಾತನಾಡಲಿಕ್ಕೆ ನಿಂತವನಲ್ಲ. ಅವರು ಉತ್ತರ ಏನು ಕೊಟ್ಟಿದ್ದಾರೆ? 20ನೇ ತಾರೀಖಿನಲ್ಲಿ ಆದಂಥ ಗೆಜೆಟ್ ನೋಟಿಫಿಕೇಶನ್ ಅನ್ನು 24ನೇ ತಾರೀಖು ಬದಲಾವಣೆ ಮಾಡುತ್ತಿದ್ದಾರೆ, ಏಕೆ? ತಾವು ಜಿಲ್ಲಾಧಿಕಾರಿಗಳಿಗೆ ಅಧಿಕಾರ ಕೊಟ್ಟರಿ. ಜಿಲ್ಲಾಧಿಕಾರಿಗಳು ಏನೋ ಒಂದು ಪಟ್ಟಿ ಮಾಡಿ ಕಳುಹಿಸಿದರು. ತಾವು ಜಿಲ್ಲಾಧಿಕಾರಿಗಳು ಕೊಟ್ಟ ಪಟ್ಟಿಯನ್ನು ಒಪ್ಪಿಕೊಳ್ಳಬೇಕಾಗಿತ್ತು. ಆದರೆ, ಡಿ.ಸಿ. ಯವರ ಪಟ್ಟಿಯಂತೆ ಆಗಲಿಲ್ಲ. 3-4-5 ಬಾರಿ ಬದಲಾವಣೆಯಾಗುತ್ತಿದೆಯಲ್ಲವೇ? 20-4-2000ದಲ್ಲಿ ಮಾಡಿದಂಥ ಆ ಪಟ್ಟಿಯನ್ನು 28ನೇ ತಾರೀಖಿನಲ್ಲಿ ಬದಲಾವಣೆ ಮಾಡಿದ್ದಾರೆ. ಇದು ಮಾನ್ಯ ಮಂತ್ರಿಗಳು ಉತ್ತರ ಕೊಟ್ಟನಂತರ ಆಗಿರುವುದು. ಇವತ್ತು ಇದು ಗೆಜೆಟ್‌ನಲ್ಲಿ ಇದೆ. ಈ ಸದನದಲ್ಲಿ ಮಾನ್ಯ ಮಂತ್ರಿಗಳು ಏನು ಹೇಳಿದರು. ಇನ್ನು ಮೇಲೆ ಯಾವುದೇ ಬದಲಾವಣೆಯಾಗುವುದಿಲ್ಲವೆಂದು ಹೇಳಿದರು. ಆದರೆ, 28ನೇ ತಾರೀಖು ಬದಲಾವಣೆಯಾಯಿತಲ್ಲ. ನಿನ್ನೆ ಕೂಡ ಬದಲಾವಣೆ ಆಗುತ್ತಾ ಇದೆ. ಆದರೆ, ಯಾವ ಉದ್ದೇಶಕ್ಕೋಸ್ಕರ ಜಿಲ್ಲಾಧಿಕಾರಿಗಳಿಗೆ ಈ ಅಧಿಕಾರ ಕೊಟ್ಟರಿ ಎನ್ನುವುದನ್ನು ತಿಳಿಯಲು ಇವತ್ತು ಮತದಾರ ಅಪೇಕ್ಷ ಪಡುತ್ತಾನೆ. ಇಲ್ಲಿ ಏನೇ ಆಶ್ವಾಸನೆ ಕೊಡಬಹುದು. ಕುಡಿಯುವ ನೀರಿನ ಬಗ್ಗೆ ತಾವು ಆಶ್ವಾಸನೆ ಕೊಡುತ್ತೀರಿ, ಕೊಡಿ ಸಂತೋಷ ಆದರೆ, ಕುಡಿಯುವ ನೀರಿನ ಬಗ್ಗೆ ಕೊಟ್ಟರತಕ್ಕ ಆಶ್ವಾಸನೆಗಳು ಈ ಹತ್ತಾರು ವರ್ಷಗಳಿಂದ ಏನಾಗಿದೆ? ಸುಮಾರು 7-8 ವರ್ಷಗಳಿಂದ ಆಗದೇ ಇರತಕ್ಕ ಕುಡಿಯುವ ನೀರಿನ ಪಟ್ಟಿಯನ್ನು ಮಾನ್ಯ ಮಂತ್ರಿಗಳಿಗೆ ಕೊಡುತ್ತೇನೆ.

ಅಧ್ಯಕ್ಷರು : ಪುನಃ ಇಲ್ಲಿರತಕ್ಕ ವಿಷಯ ಬಿಟ್ಟು ಎಲ್ಲಿಗೋ ಹೊರಟುಹೋಯಿತು. ರಿಸರ್ವೇಷನ್ ಬಗ್ಗೆ ಚರ್ಚೆಯಾಗಿ ಈಗಾಗಲೇ ಅವರು ಉತ್ತರ ಕೊಟ್ಟಿದ್ದಾರೆ. 8 ಬೇಡಿಕೆಗಳನ್ನು ಇವತ್ತು ಚರ್ಚೆಗೆ ತೆಗೆದುಕೊಳ್ಳಬೇಕೋ ಬೇಡವೋ ಅಷ್ಟು ಮಾತ್ರ ಹೇಳಿ.

ಶ್ರೀ ಬಿ.ಬಿ. ಶಿವಪ್ಪ : ತಾವು ಸಮಾಧಾನದಿಂದ ಕೇಳಬೇಕಾಗುತ್ತದೆ.

ಅಧ್ಯಕ್ಷರು : ನ್ಯಾಯವಾಗಿ ಮಾತನಾಡಿದರೆ ಸಮಾಧಾನದಿಂದ ಕೇಳೋಣ. ಅದಕ್ಕೇನಂತೆ.

ಶ್ರೀ ಬಿ.ಬಿ. ಶಿವಪ್ಪ : ಮಾತನಾಡುವ ವಿಚಾರವನ್ನೇ ನಾನು ಮಾತನಾಡುತ್ತಿರುವುದು ನಾನು ಯಾವತ್ತೂ ಮಾತನಾಡುವವನಲ್ಲ. ಇವತ್ತು ಮಾತನಾಡುತ್ತಿದ್ದೇನೆ, ಕಾರಣ ನನಗೆ ನೋವಾಗುತ್ತದೆ. ಈ ಸದನದ ಯಾವುದೋ ಕಾರಣಕ್ಕೋಸ್ಕರ ಸದನಕ್ಕೆ ಬಂದಂಥ ನಮ್ಮಂಥವರಿಗೆ ನೋವಾಗುತ್ತದೆ. ಈ ಸದನ ಈ ರೀತಿ ನಡೆಯುವುದಾದರೆ, ಕರ್ನಾಟಕ ವಿಧಾನ ಸಭೆಯ ನಡಾವಳಿಗಳು ಒಂದು ಕಾಲದಲ್ಲಿ ಪ್ರಖ್ಯಾತಿಪಟ್ಟಂಥ ಆ ಒಂದು ದೃಶ್ಯವನ್ನು ಕಂಡಾಗ ಮತ್ತು ಈ ದಿವಸ ನಡೆಯಿವ ದೃಶ್ಯವನ್ನು ನೋಡಿದಾಗ ನೋವಾಗುತ್ತದೆ. ನಾನು ಹೆಚ್ಚಿನ ಮಾತನಾಡಲು ಹೋಗುವುದಿಲ್ಲ. ಸಂಕ್ಷಿಪ್ತವಾಗಿ ತಿಳಿಸುತ್ತೇನೆ. ಇವತ್ತು, ಸರ್ಕಾರದವರು ನಿಜವಾಗಿಯೂ ಪಾರದರ್ಶಕ ಎಂದು ಹೇಳಿಕೊಳ್ಳುವುದಾದರೆ, ಜಿಲ್ಲಾಧಿಕಾರಿಗಳು ನಿಮಗೇನು ಪಟ್ಟಿ ಕೂಟ್ಟಿದ್ದಾರೆ, ಅದರಂತೆ ಚುನಾವಣೆ ಮಾಡಿ ಪ್ರತಿನಿತ್ಯ ಏಕೆ ಬದಲಾಯಿಸುತ್ತಿದ್ದೀರಿ? ಯಾವ ಕ್ಷೇತ್ರದಲ್ಲಿ, ಯಾರಾದರೂ ಆರಿಸಿ ಬರಲಿ. ಆ ವಿಚಾರ ಬೇರೆ. ಇವತ್ತು ನಾನು ಮೊದಲೇ ಹೇಳಿದಹಾಗೆ, ಮತದಾರ ಅಷ್ಟು ದಡ್ಡ ಅಲ್ಲ. ಮತದಾರ ತಕ್ಕಂತೆಯೇ ಓಟು ಕೊಡುತ್ತಾನೆ. ಕುಡಿಯುವ ನೀರಿನ ಬಗ್ಗೆ 8- 10 ವರ್ಷಗಳಿಂದ ಮಾನ್ಯ ಮಂತ್ರಿಗಳಿಗೆ ಮತ್ತು ಕಾರ್ಯದರ್ಶಿಗಳಿಗೆ ಪಟ್ಟಿ ಕೊಟ್ಟಿ, ಆದರೆ ಏನಾಗಿದೆ, ಇದುವರೆಗೂ ಆಗಲಿಲ್ಲ. ಕುಡಿಯುವ ನೀರಿನ ಕೆಲಸವನ್ನು ಪ್ರಾರಂಭ ಮಾಡಿ, 8 ವರ್ಷವಾದರೂ ಆ ಊರಿಗೆ ನೀರು ಬರಲಿಲ್ಲವೆಂದರೆ, ಇನ್ನು ನೀವು ಇವತ್ತು ಕುಡಿಯುವ ನೀರಿಗೆ ಭರವಸೆ ಕೊಡುತ್ತೀರಿ. ಇವತ್ತು ಪ್ರಾರಂಭ ಮಾಡಿದರೆ, ಮತ್ತೆ 8 ವರ್ಷಗಳ ನಂತರ ಕೇಳಬೇಕು. ಅಂದಮೇಲೆ, ಈಗ ಹೇಳುವುದೊಂದು, ಮಾಡುವುದೊಂದು ಆಗಬಾರದು. ಮಾನ್ಯ ಸದಸ್ಯರಾದ ರಾಮಯ್ಯನವರು, ಈ ರಿಸರ್ವೇಷನ್ ಸರ್ಕಾರದ ಇಚ್ಛೆ ಎಂದು ಹೇಳಿದರು, ಅದನ್ನು ಒಪ್ಪಿಕೊಳ್ಳುತ್ತೇನೆ. ಆ ಇಚ್ಛೆಗೋಸ್ಕರವೇ ನೀವು ಜಿಲ್ಲಾಧಿಕಾರಿಗಳಿಗೆ ಅಧಿಕಾರ ಕೊಟ್ಟಿರಿ. ಆದರೆ, ಈ ರೀತಿ ಕೊಟ್ಟನಂತರ, ಪ್ರತಿಯೊಬ್ಬ ಶಾಸಕನ ಇಚ್ಛೆ ಪ್ರಕಾರ ಬದಲಿಸುತ್ತಾ ಬಂದಿರಲ್ಲ, ಇದು ಆಗಬಾರದು ಎಂದು ನನ್ನ ಒತ್ತಾಯ. ಅವರು ಕೆಲಸಕ್ಕೆ ಬಾರದ ವಿಚಾರಗಳನ್ನು ಚರ್ಚೆ ಮಾಡಿದ್ದಾರೆಂದು ಹೇಳಿದರು. ಸಭೆಯ ಅಧ್ಯಕ್ಷರು ತಾವು, ದಿವಸಕ್ಕೆ 15- 20 ವಿಚಾರಗಳನ್ನು ಶೂನ್ಯವೇಳೆಯಲ್ಲಿ ಹಾಕಿ, ಗಂಟೆಗಟ್ಟಲೆ ಶೂನ್ಯ ವೇಳೆಯಲ್ಲೇ ನಾವು ಕಳೆದಿದ್ದೇವೆ ನಾವು ಎಲ್ಲಾ ಸಮಯದಲ್ಲೂ, ಸಮಯವನ್ನು ಹಾಳು ಮಾಡಿ, ಕೊನೆಯ ಎರಡು ದಿವಸವಿರುವಾಗ 20- 30 ಬೇಡಿಕೆಗಳನ್ನು ಇಟ್ಟು, ಇದರ ಬಗ್ಗೆ ಚರ್ಚೆ ಮಾಡಿ ಎಂದು ಹೇಳುವುದಾದರೆ, ಇದರ ಅರ್ಥ ಏನು?

ಅಧ್ಯಕ್ಷರು : ಇವತ್ತು 8 ಬೇಡಿಕೆಗಳು ಇವೆ. ಇವುಗಳ ಬಗ್ಗೆ ಚರ್ಚೆಯಾಗಿದೆ. ಅದಕ್ಕೆ ಮಾನ್ಯ ಮಂತ್ರಿಗಳು ಉತ್ತರ ಕೂಡಬೇಕಾಗಿರುತ್ತದೆ. ನೀವು 20- 30- 46 ಎಂದು ಏಕೆ ಹೇಳುತ್ತೀರಿ.

ಶ್ರೀ ಬಿ.ಬಿ. ಶಿವಪ್ಪ : ಇವತ್ತು ನಾನು ಹೊರಗೆ ಹೋದರೂ ಕೂಡ ಏನೂ ಆಗುವುದಿಲ್ಲ. ಆದರೆ, ನನ್ನ ಉದ್ದೇಶ ಇಷ್ಟೆ, ನಿನ್ನೆ ಖಗೆರ್ಿಯವರು ಒಂದು ಮಾತನ್ನು ಹೇಳಿದ್ದಾರೆ. 8ನೇ ತಾರೀಖಿನವರೆಗೆ ಸದನ ನಡೆಯಲಿ ಎಂದು ಹೇಳಿದ್ದಾರೆ. ಅದೇ ರೀತಿ ನಡೆಯಲಿ ನಾವು ಇಲ್ಲಿಯೇ ಕುಳಿತುಕೊಂಡಿರುತ್ತೇವೆ. ನೀವು ಏನು ಹೇಳುತ್ತಿರೋ ಅದನ್ನು ಕೇಳುತ್ತೇವೆ, ನಾನು ಹೊರಗೆ ಮಾತ್ರ ಹೋಗುವುದಿಲ್ಲ. ಏಕೆಂದರೆ, ಜನ ನಮ್ಮನ್ನು ಹೊರಗೆ ಹೋಗುವುದಕ್ಕೆ ಹೇಳಿಲ್ಲ. ನಮ್ಮನ್ನು ಒಳಗೆ ಬರಲಿಕ್ಕೆ ಹೇಳಿದ್ದಾರೆ. ಆದ್ದರಿಂದ ಒಳಗೆ ಬಂದಿದ್ದೇವೆ, ಹೊರಗೆ ಅಷ್ಟು ಸುಲಭವಾಗಿ ಹೋಗುವುದಕ್ಕಾಗುವುದಿಲ್ಲ. ಸದನ 8ನೇ ತಾರೀಖಿನವರೆಗೆ ನಡೆಯಲಿ, ತಾವು ಏನೇನು ಬೇಡಿಕೆಗಳನ್ನು ಇಡುತ್ತೀರಿ, ಏನೇನು ಪಾಸು ಮಾಡಿಕೊಳ್ಳುತ್ತೀರಿ, ಮಾಡಿಕೊಳ್ಳಿ, ನಾವು ವೀಕ್ಷಕರಾಗಿ ಕುಳಿತಿರುತ್ತೇವೆಂದು ಹೇಳುತ್ತೇನೆ. ಸನ್ಮಾನ್ಯ ಅಧ್ಯಕ್ಷರೇ, ತಾವು ಭಾರಿ ಕೋಪ ಮಾಡಿಕೊಂಡಿದ್ದೀರಿ....

ಅಧ್ಯಕ್ಷರು : ಇಲ್ಲ, ಇಲ್ಲ, ನಾನು ಏಕೆ ಕೋಪ ಮಾಡಿಕೊಳ್ಳಬೇಕು?

ಶ್ರೀ ಬಿ. ಬಿ. ಶಿವಪ್ಪ : ಇದು ಕೋಪ ಮಾಡಿಕೊಳ್ಳತಕ್ಕ ವಿಚಾರ ಅಲ್ಲ. ಪ್ರಜಾಪ್ರಭುತ್ವದಲ್ಲಿ ನಡೆಯುತ್ತಾ ಇರತಕ್ಕ ಈ ವಾತಾವರಣ ಏನಿದೆ, ಇದು ಸರಿಯಲ್ಲ. ಅದನ್ನು ತಿಳಿಪಡಿಸತಕ್ಕ ಪ್ರಯತ್ನದಲ್ಲಿ ಎಲ್ಲಾ ರಾಜಕೀಯ ಪಕ್ಷಗಳು ತಮ್ಮ ರಾಜಕೀಯದ ಹೊಡೆತಗಳೇನಿವೆ ಅದನ್ನು ಬಿಟ್ಟು, ಒಳ್ಳೆಯ ರೀತಿಯಲ್ಲಿ ರಾಜ್ಯದ ಹಿತದೃಷ್ಟಿಯಿಂದ ಅತ್ತ ಕಡೆ ಗಮನ ಹರಿಸಬೇಕೆಂದು ತಮ್ಮ ಮುಖಾಂತರ ಕೇಳಿಕೊಂಡು, ನನ್ನ ಮಾತುಗಳನ್ನು ಮುಗಿಸುತ್ತೇನೆ.

+ಶ್ರೀ ಡಿ. ಬಿ. ಚಂದ್ರೇಗೌಡ : ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಶಿವಪ್ಪನವರು ಸದನಕ್ಕೆ ಎರಡು ಸಾರಿ ಬಂದರೂ, ಅವರ ಹಿರಿತನ ಏನೂ ಕಡಿಮೆಯಾಗಿಲ್ಲ, ಅದರಿಂದ, ಅವರು ಹಿರಿತನದ ಮಾತುಗಳನ್ನು ಆಡಿದ್ದಾರೆ. ವಿರೋಧ ಪಕ್ಷಗಳು ಏನು ಮಾಡಿದವು, ಸರ್ಕಾರದ ಏನು ಮಾಡಿತು ಎಂಬುದನ್ನು ಹೇಳಿದ್ದಾರೆ. ಆದರೆ, ಅವರು ಕೇಳಿದಂಥ ಕೆಲವು ವಿಚಾರಗಳಿಗೆ ಸ್ಪಷ್ಟೀಕರಿಸಬೇಕಾಗುತ್ತದೆ. ಸರ್ಕಾರ ಪ್ರತಿಷ್ಠೆ ಮೇಲೆ ನಿಲ್ಲಲೇ ಇಲ್ಲ. ಆಯವ್ಯಯದ ಚರ್ಚೆ ಮಾಡಬೇಕೆಂದೇ ಈ ಅಧಿವೇಶನ ಕರೆದದ್ದು. ಆ ಬೇಡಿಕೆಗಳಲ್ಲಿ ಈಗ 8 ಬೇಡಿಕೆಗಳು ಆಗುತ್ತವೆ. ಉಳಿದಿರತಕ್ಕಂಥ 49 ಬೇಡಿಕೆಗಳನ್ನೂ ಪಟ್ಟಿಯಲ್ಲಿ ಹಾಕಿದ್ದೇವೆ, ಎಲ್ಲವೂ ಒಂದೇ ದಿವಸ ಚರ್ಚೆಯಾಗಬೇಕೆಂದಲ್ಲ. ಆದರೆ, ವಿರೋಧ ಪಕ್ಷ ಮತ್ತು ಆಳುವ ಪಕ್ಷದಲ್ಲಿ ತೀರ್ಮಾನ ಏನಾಗಿತ್ತು? ಸೀಮಿತವಾದಂಥ ಬೇಡಿಕೆಗಳನ್ನು ಮಾತ್ರ ಚರ್ಚೆ ಮಾಡುವಂತಾದ್ದು ಎಲ್ಲಾ ವಿಚಾರಗಳನ್ನೂ ಚರ್ಚೆ ಮಾಡಲು ಸಾಧ್ಯವಾಗುವುದಿಲ್ಲವೆಂಬ ಅಭಿಪ್ರಾಯಕ್ಕೆ ಬಂದೇ, ಕೆಲವು ಬೇಡಿಕೆಗಳನ್ನು ಮಾತ್ರ ಚರ್ಚೆಗೆ ತೆಗೆದುಕೊಳ್ಳಬೇಕೆಂದಾಯಿತು. ನಮ್ಮ ಅನುಭವದ ಮೇಲೆ ಮತ್ತು ನಾವು ತಿಳಿದುಕೊಂಡಿರುವ ಹಾಗೆ, ಎಲ್ಲಾ ಕಾಲಕ್ಕೂ ಎಲ್ಲಾ ಬೇಡಿಕೆಗಳೂ ಸದನದಲ್ಲಿ ಚರ್ಚೆಯಾಗಿರುವುದು ಇಲ್ಲ. ಎಲ್ಲಾ ಕಾಲಕ್ಕೂ ನಡೆದಿರುವುದು, ಕೇವಲ ಕೆಲವು ಬೇಡಿಕೆಗಳು ಮಾತ್ರ ಚರ್ಚೆಯಾಗಿ, ಉಳಿದ ಬೇಡಿಕೆಗಳನ್ನು ಗಿಲೋಟಿನ್ ಮಾಡತಕ್ಕಂಥ ಸಂಪ್ರದಾಯ ಇತ್ತು. ಈ ಸಂಪ್ರದಾಯ ನಮ್ಮದೇನೂ ಹೊಸದಲ್ಲ, ನಿನ್ನೆ ತಾನೆ ಲೋಕಸಭೆಯಲ್ಲಿ ಆಗಿರತಕ್ಕ ವಿಚಾರ, ಇಂದೂ ಪತ್ರಿಕೆಯಲ್ಲಿ ಬಂದಿದೆ. ನ್ಯಾಷನಲ್ ಪಾರ್ಲಿಮೆಂಟ್ ಎಂಬ ಕ್ಯಾಪ್ಷನ್ ಮೇಲೆ ಬರೆದಿರುವುದನ್ನು ತಮ್ಮ ಗಮನಕ್ಕೆ ತರುವ ಸಲುವಾಗಿ ಹೇಳುತ್ತೇನೆ. ಕೇಂದ್ರದಲ್ಲಿ ತಮ್ಮದೇ ಸರ್ಕಾರ ಕೆಲಸ ಮಾಡುತ್ತಾ ಇದೆ. ಶ್ರೀಮಾನ್ ವಾಜಪೇಯಿಯವರು ಪ್ರಧಾನಮಂತ್ರಿ ಇದ್ದಾರೆ. ಈಗ ಹೋಗಿರತಕ್ಕ ಎಲ್ಲಾ ಜನ, ಅದರ ಬಹುತೇಕ ಎನ್. ಡಿ. ಎ. ಪಾಲುದಾರರು. ನಿನ್ನೆ ಮಾನ್ಯ ಸಿಂಧ್ಯರವರಿಗೆ ಅದಕ್ಕಾಗಿಯೇ ನಾನು ಹೇಳಿದೆ. ನಿಮ್ಮ ರಾಷ್ಟ್ರೀಯ ಹೊಂದಾಣಿಕೆ ಏನಿದೆ, ಅದನ್ನು ಪ್ರತಿಭಟಿಸಿ ಅಲ್ಲಿಂದ ಹೊರಗೆ ಬರುತ್ತಾರೆಂದು ನಾವು ತಿಳಿದಿದ್ದೆವು. ಆದರೆ, ನೀವು ಇಲ್ಲಿಂದ ಹೊರಗೆ ಹೋಗಿದ್ದೀರಿ. ಇದರಿಂದ ಏನೂ ಪ್ರಯೋಜನವಾಗುವುದಿಲ್ಲ. ಇವತ್ತು ಹಿಂದೂ ಪತ್ರಿಕೆಯಲ್ಲಿ ಏನು ಬಂದಿದೆ ಎಂಬುದನ್ನು ತಮ್ಮ ಗಮನಕ್ಕೆ ತರಲು ಹೇಳುತ್ತಿದ್ದೇನೆ.

" Thanks to the thin attendance by the Opposition parties in the Lok Sabha this evening. The Government got demands for grants of various ministries passed in less than ten minutes. What helped matters was a few opposition memebers present walked out once the Speaker disallowed the cut-motions pertaining to ministries which were not taken up for discussion.

ಇದು ಅವತ್ತು ನಮ್ಮ ಸದನಕ್ಕೆ ಅಷ್ಟೇ ಸೀಮಿತವಾಗಿ ಏನೂ ಇಲ್ಲ.ಅಲ್ಲಿ ಚರ್ಚೆಯನ್ನು ಮಾಡಿಲ್ಲ. ಯಾವುದೇ ಕಟ್ ಮೋಷನ್ಸ್ ಹಾಕಲಿಲ್ಲ. ನಾವು ಹೊರಗೆ ಹೋಗುತ್ತೇವೆಂದು ಹೇಳಿದರೆ ಹೇಗೆ? ಮಾನ್ಯ ಖರ್ಗೆಯವರು ಒಂದು ಸಲಹೆಯನ್ನು ಕೊಟ್ಟರು. ಮಾನ್ಯ ಸಿಂಧ್ಯಾರವರು ಒಂದು ಸಲಹೆಯನ್ನು ನಿನ್ನೆ ಕೊಟ್ಟಿದ್ದಕ್ಕೆ ನಾವು ಸರ್ಕಾರ ಒಂದು ವೇಳೆ ತಾವು ಹೇಳಿದ ಹಾಗೆ ಸಾರ್ವಜನಿಕ ಕೆಲಸಕ್ಕೆ ಅಡ್ಡಿ ಬಂದಲೂ ಕೂಡ ಇದನ್ನು ಸಹಿಸಿಕೊಳ್ಳುತ್ತೇವೆಂದು ಹೇಳಿ, ಸಭಾನಾಯಕರು ಮಾನ್ಯ ಮುಖ್ಯಮಂತ್ರಿಗಳು ಆಗಲಪ್ಪ ಈ ಚರ್ಚೆಗೆ ಉತ್ತರ ಬಂದ ಮೇಲೆ ಏನು ಮಾಡಬೇಕೆಂದು ನಾವೆಲ್ಲ ಕುಳಿತು ತೀರ್ಮಾನ ಮಾಡೋಣ ಎಂದು ಹೇಳಿದರು. ಜೊತೆಗೆ ಇಂಡಿಕೇಶನ್ಸ್ ಕೂಡ ಕೊಟ್ಟರು. ಜೂನ್ 12ನೇ ತಾರೀಖು ಬೇಕಾದರೆ ಉಳಿದ ಡಿಮ್ಯಾಂಡ್ಸ್ ಚರ್ಚೆ ಮಾಡೋಣ ಎಂದು. ಇದಕ್ಕಿಂತ ಹೆಚ್ಚು ಸರ್ಕಾರ ಏನು ಮಾಡಬಹುದು ಮಾನ್ಯ ಶಿವಪ್ಪನವರೇ? ಏಕೆಂದರೆ ತಾವು ಹೇಳುವಾಗ ಉಳಿದಿರತಕ್ಕಂಥ ಬೇಡಿಕೆಗಳನ್ನು ಸಹಜವಾಗಿ ಹಾಕಿದ್ದೇವೆ. ನಾವು ಇವತ್ತೇ ಚರ್ಚೆ ಮಾಡಿ ಎಲ್ಲಾ ಮುಗಿಸಿಬಿಡಿ ಎಂದು ಹೇಳಲಿಲ್ಲ. ಆಲ್ಟರ್‌ನೇಟೀವ್ ಪ್ರೊಪೊಸಲ್ಸ್ ಕೂಟ್ಟು ಇನ್ನು ಮೂರು ದಿವಸ ಎಕ್ಸ್‌ಟೆನ್‌ಷನ್ ಮಾಡಿ ಕುಳಿತುಕೊಳ್ಳೋಣ. ಇದಕ್ಕೂ ಸಮ್ಮತಿ ಇಲ್ಲ. ಅದಕ್ಕೆ ನಾನು ಹೇಳಿದೆ ''ಒಲ್ಲದ ಗಂಡನಿಗೆ ಮೊಸರಿನಲ್ಲಿ ಕಲ್ಲು ಸಿಕ್ಕಿತು'' ಎಂದು. ಎನೋ ಒಂದು ಕಾರಣ ಮಾಡಿಕೊಂಡು ಹೊರಗೆ ಹೋಗುವುದು. ಅದಕ್ಕೆ ನಾವೇನು ಮಾಡುವುದು? ತಾವು ಹೇಳಿದ ಹಾಗೆ ನಾವು ಇಲ್ಲಿ ಬಂದಿರತಕ್ಕಂಥಾದ್ದು, ಜನರ ಕೆಲಸವನ್ನು ಮಾಡುವುದಕ್ಕೆ. ಶಾಸನ ಸಭೆಯ ಉದ್ದೇಶವನ್ನು ಈಡೇರಿಸುವುದಕ್ಕಾಗಿ ಸರ್ಕಾರ ಸದಾ ಕಟಿ ಬದ್ಧವಾಗಿದೆ. ಇದರಲ್ಲಿ ತಾವು ಯಾವ ಶಂಕೆಯನ್ನು ಇಟ್ಟುಕೊಳ್ಳಬೇಡಿ. ಅದನ್ನೇ ಮಾನ್ಯ ಮುಖ್ಯ ಮಂತ್ರಿಗಳು ಪಾರದರ್ಶಕ ಎಂದು ಹೇಳಿದ್ದು. ಪಾರದರ್ಶಕ ಅಂದರೆ ತಪ್ಪನ್ನು ತಾವು ಹುಡುಕತಕ್ಕಂಥ ಕೆಲಸವನ್ನು ಮಾಡದೇ ಹೊರಗಡೆ ಹೋಗಿಬಿಟ್ಟು ಪಾರದರ್ಶಕ ಅಂದರೆ ಹೇಗೆ? ಹುಡುಕುವುದು ಹೇಗೆ? ಸರ್ಕಾರ ನಾವು ಪಾರದರ್ಶಕ ಎಂದು ಹೇಳಿಕೊಂಡರೆ ಅದು ಪಾರದರ್ಶಕವಾಗುವುದಿಲ್ಲ. ನೀವು ಯಾವ ವಿಚಾರಗಳನ್ನು ಪ್ರಸ್ತಾಪ ಮಾಡುತ್ತೀರಿ, ಅದು ಪಾರದರ್ಶಕವಾಗಿಲ್ಲ ಎನ್ನುವಂತಹ ವಾದವನ್ನು ಪ್ರತಿಪಕ್ಷಗಳು ಮಂಡಿಸಬೇಕೇ ಹೊರತು ಆ ಕೆಲಸವನ್ನಾದರೂ ಮಾಡಬೇಕಲ್ಲ, ಅದೂ ಇಲ್ಲದೆ ತಾವು ಹೊರಗಡೆ ಹೋಗಿಬಿಟ್ಟರೆ ಹೇಗೆ? ಇದು ನನಗೆ ಅರ್ಥವಾಗುತ್ತಿಲ್ಲ. ತಾವು ಹೇಳಿದಹಾಗೆ ಶೂನ್ಯ ವೇಳೆಯಲ್ಲಿ ಹೆಚ್ಚು ಸಮಯವನ್ನು ಕಳೆದಿದ್ದೇವೆ. ಅನೇಕ ವೇಳೆ ಬಹಳ ಮುಖ್ಯವಾದ ವಿಚಾರಗಳನ್ನು ಬಿಟ್ಟು ಶೂನ್ಯ ವೇಳೆಯಲ್ಲಿ ಕಳೆದಿದ್ದೇವೆ. ಅದಕ್ಕಾಗಿಯೇ ನಾನು ತಮ್ಮಲ್ಲಿ ಮನವಿ ಮಾಡಿದೆ ಶೂನ್ಯ ವೇಳೆ ಅಂದರೆ ವಿಷಯವನ್ನು ಸರ್ಕಾರದ ಗಮನಕ್ಕೆ ತರುವುದು ಅಲ್ಲ. ಈ ಸದನದ ಗಮನಕ್ಕೆ ತರುವುದು ಮಾತ್ರ. ಸರ್ಕಾರ ಉತ್ತರ ಹೇಳಬೇಕೆನ್ನುವ ನಿಯಮ ಇಲ್ಲ. ಆದರೂ ನಿಮ್ಮ ಅಭಿಪ್ರಾಯಕ್ಕೆ ಮನ್ನಣೆ ಕೊಡುವ ದೃಷ್ಟಿಯಿಂದ ಸರ್ಕಾರ ಉತ್ತರ ಕೊಟ್ಟಿದೆ. ಸರ್ಕಾರ ಸಾಧ್ಯವಾದಷ್ಟು 24 ಗಂಟೆಗಳಲ್ಲಿ ಕೆಲವು ವಿಷಯಗಳಿಗೆ ಉತ್ತರ ತರಿಸಿಕೊಟ್ಟಿದ್ದೇವೆ. ಮಾನ್ಯ ಸಕ್ಕರೆ ಸಚಿವರು ಶೂನ್ಯ ವೇಳೆಯಲ್ಲಿ ಪ್ರಸ್ತಾಪ ಮಾಡಿದ ಒಂದು ವಿಷಯಕ್ಕೆ ಸುಮಾರು ಒಂದೂವರೆ ಗಂಟೆ ಉತ್ತರ ಕೊಟ್ಟಿದ್ದಾರೆ. ಸರ್ಕಾರ ಇದಕ್ಕಿಂತ ಇನ್ನೇನು ಮಾಡಬಹುದು ತಾವೇ ಹೇಳಿ. ಇವೆಲ್ಲವನ್ನು ಬದಿಗಿಟ್ಟು ನಾನು ಕಳೆದ ಸಲ ಹೇಳಿದೆ, ಕಳೆದ ಸಾರಿ ಚುನಾವಣೆ ಬಂದಾಗ ಇಲ್ಲಿ ಕುಳಿತಿದ್ದಂತಹ ಸದಸ್ಯರೇ ಇವತ್ತು ಅಲ್ಲಿ ಕುಳಿತಿರುವವರು. ಹೊಸಬರೇನೂ ಅಲ್ಲ. ಸರ್ಕಾರ ನಡೆಸುತ್ತಿದ್ದಂತಹ ಮುಖಂಡರು ಅಲ್ಲಿ ಇವತ್ತು ಕುಳಿತಿದ್ದಾರೆ. ಅವರೇನು ಮಾಡಿದರು? ಅವರು ಇದೇ ಕೆಲಸ ಮಾಡಿದರು. ಎಲ್ಲವನ್ನು ಗಿಲೊಟಿನ್ ಮಾಡಿ ಚರ್ಚೆಯನ್ನು ಸ್ಥಗಿತಗೊಳಿಸಿ ವಿಧಾನ ಸಭೆಯನ್ನು ಮುಂದಕ್ಕೆ ಹಾಕಿ ನಡೆಯಿರಿ ಚುನಾವಣೆಗೆ ಹೋಗೋಣ ಎಂದು ಹೇಳಿಹೋದರು. ನಾವು ಅಂತಹ ಕೆಲಸವನ್ನು ಮಾಡಲಿಲ್ಲ. ಚರ್ಚೆಗೆ ನಾವು

ಸಿದ್ಧರಾಗಿದ್ದೇವೆ ಎನ್ನುವ ಮಾತನ್ನು ಹೇಳಿದ್ದೇವೆ. ಎಕ್ಸ್‌ಟೆನ್‌ಷನ್ ಮಾಡೋಣ ಎಂದು ಹೇಳಿದೆವು. ಮುಂದಿನ ತಿಂಗಳಲ್ಲಿ ಹಾಕಿ ಚರ್ಚೆ ಮಾಡೋಣ ಎನ್ನುವ ಮಾತನ್ನು ಹೇಳಿದೆವು. ಇನ್ನು ಯಾವುದಕ್ಕೂ ಕೂಡ ಇವರಿಗೆ ಇಷ್ಟವಾಗುವುದಿಲ್ಲ ಅಂದರೆ ಬಹುಶಃ ಅವರಿಗೆ ಇಷ್ಟವಾಗಬೇಕು ಎನ್ನುವಂತಹ ಒಂದೇ ಒಂದು ಹಠ ಇದ್ದರೆ ಮಾನ್ಯ ಅಧ್ಯಕ್ಷರೇ ನಾನು ಅನೇಕ ಬಾರಿ ಮಾನ್ಯ ಮುಖ್ಯ ಮಂತ್ರಿಗಳಲ್ಲಿ ಮನಿಸಿಕೊಂಡಿದ್ದುಂಟು. ಕಾರಣವೇನೆಂದರೆ ಪ್ರತಿಪಕ್ಷದವರು ಕೇಳಿದ್ದೆಲ್ಲ ಮಾಡುತ್ತಾರೆ ಎಂದು ಸಿ. ಒ. ಡಿ. ತನಿಖೆಗೆ ಆಗಬೇಕೆಂದರೆ ಸಿ. ಒ. ಡಿ. ತನಿಖೆ. ಸಿ. ಬಿ. ಐ. ತನಿಖೆ ಆಗಬೇಕೆಂದರೆ ಸಿ. ಬಿ. ಐ ಈ. ತನಿಖೆ ಮಾಡಿಸಲು ನಾವು ಸಿದ್ಧ ತಾವೇ ಹೇಳಿ ಇದಕ್ಕಿಂತ ಹೆಚ್ಚು ಪಾರದರ್ಶಕವಾದ ಸರ್ಕಾರವನ್ನು ಬಹುಶಃ ಅವರು ಹಿಂದೆ ನೋಡಿಲ್ಲ, ಮುಂದೆ ನೋಡುತ್ತಾರೋ ಇಲ್ಲವೋ ನನಗೆ ಗೊತ್ತಿಲ್ಲ. ಇದಕ್ಕಿಂತ ಹೆಚ್ಚಾಗಿ ನಮ್ಮ ಮಾನ್ಯ ಮುಖ್ಯಮಂತ್ರಿಗಳು ಹೋದರು ಎಂದು ನಾವು ನಮ್ಮ ನಮ್ಮಲ್ಲಿಯೇ ಚರ್ಚೆ ಮಾಡಿಕೊಂಡೆವು. ಆದರೆ, ಇಲ್ಲಿ ಪ್ರತಿಪಕ್ಷಗಳು ಹೇಳಿದಂತಹ ಸಲಹೆಯನ್ನು ಒಪ್ಪಿಕೊಂಡಿದ್ದಾರೆ ಎನ್ನುವಂತಹ ಮಾತನ್ನು ದೊಡ್ಡಸ್ಥಿಕೆಯಿಂದ ಮೆಚ್ಚಿಕೊಳ್ಳುತ್ತಾರೆಂದು ನಾನು ಭಾವನೆ ಮಾಡಿದ್ದೆ. ಆದರೆ ಮೊಂಡುತನ ಇದೆಯಲ್ಲ, ಇದು ಜನತಂತ್ರಕ್ಕೆ, ಪ್ರಜಾಸತ್ತೆಗೆ ಒಳ್ಳೆಯ ಸಂಪ್ರದಾಯವಲ್ಲ. ಮಾನ್ಯ ಶಿವಪ್ಪನವರೇ ನಾವು ಆ ಸಲಹೆಯನ್ನು ಈಗಲೂ ಒಪ್ಪಿಕೊಳ್ಳುವುದಕ್ಕೆ ಸಿದ್ಧರಿದ್ದೇವೆ, ತಾವೂ ಈಗಲೂ ಏನಾದರೂ ಅವರ ಮನವೊಲಿಸಿ, ಇಲ್ಲಿ ಚರ್ಚೆ ಮಾಡುವುದಾದರೆ ನಾವು ಅವರನ್ನು ಸ್ವಾಗತ ಮಾಡುವುದರ ಜೊತೆಗೆ ಅವರು ಹೇಳತಕ್ಕಂಥಾ ಎಲ್ಲಾ ವಿಚಾರಗಳನ್ನು ಸರ್ಕಾರ ಬಹಳ ಗಂಭೀರವಾಗಿ ಪರಿಗಣಿಸುತ್ತದೆ ಅದಕ್ಕೆ ಉತ್ತರ ಕೊಡುತ್ತದೆ ಎನ್ನುವಂತಹ ಮಾತನ್ನು ಈ ಸದನದ ಮೂಲಕ ನಾನು ಅವರಲ್ಲಿ ಮತ್ತೆ ಪ್ರಾರ್ಥನೆ ಮಾಡುತ್ತೇನೆ, ಅವರು ಬಂದು ಸಭೆಯಲ್ಲಿ ಪಾಲ್ಗೊಳ್ಳಲಿ ಚರ್ಚೆ ಮಾಡೋಣ. ತಾವು ಹೇಳಿದ ಹಾಗೆ ಬೇಕಾದರೆ ಇನ್ನು ಮೂರು ದಿವಸ ಚರ್ಚೆ ಮಾಡೋಣ. ಅದಕ್ಕೆ ಸರ್ಕಾರ ಸಿದ್ಧವಾಗಿದೆ. ಪುನಃ ನಾನು ಅವರನ್ನು ಈ ಸಭೆಗೆ ಬರಬೇಕೆಂದು ಹೇಳಿ ನಾನು ತಮ್ಮ ಮೂಲಕ ಆಹ್ವಾನಿಸುತ್ತೇನೆ.

ಅಧ್ಯಕ್ಷರು : ನನ್ನ ಅಭಿಪ್ರಾಯದಲ್ಲಿ, ಹೋದ ತಿಂಗಳು ಸಲಹಾ ಸಮಿತಿಯವರು 28ನೇ ತಾರೀಖು ಸದನವನ್ನು ಮುಗಿಸಬೇಕೆಂದು ಹೇಳಿದ್ದರು. ಪುನಃ ವಿರೋಧ ಪಕ್ಷದವರನ್ನು ಮತ್ತು ಆಡಳಿತ ಪಕ್ಷದವರನ್ನು ಕೇಳಿ, 5ನೇ ತಾರೀಖಿನವರೆಗೂ ಮುಂದಕ್ಕೆ ಹಾಕಿದೆವು. 5ನೇ ತಾರೀಖಿನವರೆಗೆ ಮುಂದಕ್ಕೆ ಹಾಕಿದ ಮೇಲೆ ಈಗ 8 ಬೇಡಿಕೆಗಳು ಸಭೆಯ ಮುಂದೆ ಇವೆ. ಅವರ ಸಲಹೆಯಂತೆ 5ನೇ ತಾರೀಖಿನವರೆಗೂ ಹಾಕಿದ್ದು. ಈಗ ಚುನಾವಣೆಗಳನ್ನು ಘೋಷಣೆ ಮಾಡಿದರು. ಇದು ಅವರಿಗೂ ಗೊತ್ತಿತ್ತು ನಮಗೂ ಗೊತ್ತಿತ್ತು. ಆದರೂ ಅವರು ಏನೋ ಒಂದು ಪಟ್ಟು ಹಿಡಿದು ಈ ರೀತಿ ಮಾಡಿದ್ದು ಅಷ್ಟು ಸಮಂಜಸವಾಗಿಲ್ಲ. ನಾನು ಅಧ್ಯಕ್ಷನಾಗಿ ಸದನದ ಸಲಹಾ ಸಮಿತಿಯಲ್ಲಿ ಏನು ನಡೆಯಿತು ಅದನ್ನು ಕಾರ್ಯರೂಪಕ್ಕೆ ತರುವುದು ನನ್ನ ಧರ್ಮ. ಅದಕ್ಕೋಸ್ಕರ ನಾನು ಇವತ್ತು ಇದನ್ನು ಅಲೋ ಮಾಡುತ್ತಿದ್ದೇನೆ. ದಯವಿಟ್ಟು ಮಾನ್ಯ ಮಂತ್ರಿಗಳು ಉತ್ತರ ಹೇಳಬಹುದು.